530

ಯಕ್ಷಗಾನ

ಪುಂಡರೀಕ-ಚರಿತ್ರೆ

ದಿವಂಗತ ಹಲಸಿನಹಳ್ಳಿ

- ನರಸಿಂಹ ಶಾಸ್ತ್ರಿ ವಿರಚಿತ

ಶ್ರೀ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

★

ಯಕ್ಷಗಾನ

ಪುಂಡರೀಕಚರಿತ್ರೆ

★

ಎರಡನೆಯ ಅಚ್ಚು: ೧೯೫೩

ಶ್ರೀಕೃಷ್ಣಮುದ್ರಣಾಲಯ ಉಡುಪಿ

ಆಣೆ 3-2

ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

★

ಯಕ್ಷಗಾನ

ಪುಂಡರೀಕಚರಿತ್ರೆ

★

ಲೇಖಕರು:

ದಿವಂಗತ ಹಲಸಿನಹಳ್ಳಿ ನರಸಿಂಹಶಾಸ್ತ್ರಿಗಳು

ಎರಡನೆಯ ಅಚ್ಚು: ೧೯೫೩

ಶ್ರೀಕೃಷ್ಣಮುದ್ರಣಾಲಯ ಉಡುಪಿ

ಅಚ್ಚುಗಾರರು:
ಶ್ರೀಕೃಷ್ಣ ಮುದ್ರಣಾಲಯ
ಉಡುಪಿ

ಪ್ರಕಾಶಕರು:
ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ

ಶ್ರೀಃ



॥ ಶ್ರೀವಿಟ್ಠಲಾಯ ನಮಃ ॥

ಶ್ರೀಸ್ಕಾಂದಪುರಾಣಾಂತರ್ಗತ

ಯಕ್ಷಗಾನ ಪುಂಡರೀಕಚರಿತ್ರೆ

ಶಾರ್ದೂಲವಿಕ್ರೀಡಿತಂ

ಶ್ರೀಮದ್ವಿಟ್ಠಲ ಪುಂಡರೀಕವರದಂ ಶ್ರೀರುಕ್ಮಿಣೀವಲ್ಲಭಂ
ಶ್ರೀಪದ್ಮೋದ್ಭವಪೂಜಿತಾಂಘ್ರಿಯುಗಳಂ ವೈಕುಂಠವಾಸಂ ಹರಿಮ್ ।
ಭೀಮಂ ಚಂಡಪರಾಕ್ರಮಂ ನಗಧರಂ ಸ್ತಂಭೋದ್ಭವಂ ಭೀಷಣಂ
ಸೋಮಾದಿತ್ಯಸಹಸ್ರತೇಜವದನಂ ಧ್ಯಾಯಾಮಿ ಕಂಠೀರವಮ್ ॥

ರಾಗ ನಾಟಿ ಝಂಪೆತಾಳ

ಇಂದುಧರನ ಜಾತ । ಇಂದ್ರಾದಿಸುರಪ್ರೀತ । ಸುಂದರಗಣನಾಥ । ಸ್ಕಂದಾಗ್ರಜಾತ ॥ ಜಯ ಜಯತು ಜಯತು ॥ ೧ ॥ ಮಂದಹಾಸದೊಳೆನ್ನ । ನಿಂದು ರಕ್ಷಿಸೊ ಮುನ್ನ । ತಂದೆ ನಂಬಿದೆ ನಿನ್ನ । ಕಂದನಾದೆನ್ನ ॥ ಜಯ ಜಯತು ಜಯತು ॥ ೨ ॥ ನಲಿನಲಿದು ಎನ್ನ ಕೃತಿ । ಗೊಲಿದು ಕಾರುಣ್ಯವನು । ಚೆಲುವಸ್ತಂಭದ ಗಣಪ । ಸಲಹೆನ್ನ ದೇವ ॥ ಜಯ ಜಯತು ಜಯತು ॥ ೩ ॥

ಭಾಮಿನಿ

ಹಿಮಗಿರೀಂದ್ರಕುಮಾರಿಗೊಂದಿಸಿ । ಕಮಲಸಂಭವನರಸಿ ಶಾರದೆ । ವಿಮಲಪದಪಂಕೇಜವನು ಸನ್ನುತಿಸಿ ಭಕ್ತಿಯೊಳು ॥ ರಮೆಯ ಪ್ರಾರ್ಥನೆಗೈದು ವಿನಯದಿ । ಸುಮನಸರ ಧ್ಯಾನಿಸುತ ಮನುಮುನಿ । ಜನರಿಗೊಂದಿಸಿ ಕೃತಿಯ ಗೆಯ್ಯುವೆನಧಿಕ ಸಂತಸದಿ ॥ ೧ ॥

ದ್ವಿಪದಿ

ಶುಕ ಶೌನಕ ವ್ಯಾಸ ಕಣ್ವ ಮುನಿಗಳಿಗೆ । ಭಕುತಿಯೊಳಗೆರಗುವೆನು ಮಾತೃಪಿತೃಗಳಿಗೆ ॥ ೧ ॥ ಪುರಹರಗೆ ಪಾರ್ವತಿಗೆ ಗುಹಗೆ ನಾರದಗೆ । ಹರುಷದಿಂ ವಂದಿಸುವೆ ಗುರುಪರಾಶರಗೆ ॥ ೨ ॥ ಹಿಂದೆ ನೈಮಿಷವನದಿ ಶುಕನು ಮುನಿಗಳಿಗೆ । ಸ್ಕಾಂದಪೌರಾಣವನೆ ಪೇಳೆ ಮುದದೊಳಗೆ ॥ ೩ ॥ ಪುಂಡರೀಕನ ಭಕ್ತಿಗೊಲಿದು ವಿಟ್ಠಲನು । ಪಂಢರಾಪುರಕಾಗಿ ಬಂದ ಕಥನವನು ॥ ೪ ॥ ಪುಂಡರೀಕನ ಚರಿತೆ ಪೇಳಬೇಕೆನುತ । ಚಂಡಋಷಿ ಮಂಡಲವು ಕೇಳುತಿರೆ ಮತ್ತಾ ॥ ೫ ॥ ಹರುಷದಲಿ ಶುಕಮುನಿಪನೊರೆದ ಕಥನವನು । ಅರುಹುವೆನು ಅರಿತಂತೆ ಹರಿಯ ಚರಿತೆಯನು ॥ ೬ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಪರಮಋಷಿಮಂಡಲಕೆ ಶುಕಮುನಿ । ಹರಿಯನೊಲಿಸಿದ ಪುಂಡರೀಕನ । ಚರಿತೆಯನು ಮತ್ತಾಗ ಪಂಢರ । ಪುರದ ಕಥೆಯ ॥ ೧ ॥ ದುರಿತ ಹರವಹ ಚಂದ್ರಭಾಗದ । ಸರಸಿಮಹಿಮೆಯನತ್ರಿಸಂಭವ । ಗುರುಸತಿಯ ಕೂಡಿರ್ದ ವಿವರವ । ನೊರೆದನಾಗ ॥ ೨ ॥ ಚರಿತೆಯನು ವಿಸ್ತಾರದಿಂದಲಿ । ಒರೆಯಬೇಕೆನೆ ಮನ್ನಿಸುತ ಮುದ । ವೆರಸಿ ಕೇಳಿರೆನುತ್ತ ಲಕುಮಿ । ವರನ ನೆನೆದು ॥ ೩ ॥ ಪದುಮನಾಭನು ವಸುಧೆಭಾರವ । ಮುದದಿ ಪರಿಹರಿಸಲ್ಕೆ ದೇವಕಿ । ಯುದರದೊಳಗುದ್ಭವಿಸಿ ಖಳರನು । ಸದೆದು ಭರದಿ ॥ ೪ ॥ ನಂದಗೋಕುಲದಲ್ಲಿ ಯಾದವ । ವೃಂದದೊಡಗೂಡುತ್ತ ಮೋದದೊ । ಳಿಂದಿರಾಧವನಿರ್ದ ಪೇಳುವೆ । ಮುಂದೆ ಕಥೆಯ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಸುರಲೋಕದೊಳಗೊಂದು ದಿವಸ ಪುರಂದರ । ಮರುತಾಗ್ನಿಗಳ ಕೂಡುತ ॥ ಹರುಷದಿಂದೋಲಗಕಯ್ತರಲಪ್ಸರ । ತರುಣಿಯರ್ ನಟಿಸುತಿರೆ ॥ ॥ ೧ ॥ ಉರಿಯು ಭಡಾಳಿಸಿ ಸುರರ ದುರ್ಗವನ್ನೆಲ್ಲ । ತರುಬಿ ಸುಡುತ ಬರಲು ॥ ಅರರೆ ಇದೇನೆಂದೆನುತಲಾ ಪುರಂದರ । ಬೆರಗಾಗಿ ನೋಡುತಿರೆ ॥ ೨ ॥ ಅನಿತರೊಳಂಬರಮಣಿಕೋಟಿಪ್ರಭೆಯೊಳ । ಗನಿಮಿಷಪಾಲಕನ ॥ ಮನದ ಚಿಂತೆಗಳನ್ನು ತಿಳಿದರುಹಲು ಬೇಗ । ಮುನಿಪ ನಾರದನೈತಂದ ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಹರಿ ನಾರಾಯಣ ಕೃಷ್ಣನೆನುತಾಲೈತಂದಿಹ । ಸುರಮುನಿಪನ ಕರೆತಂದು ॥ ಸುರುಚಿರವಾದ ಪೀಠವನಿತ್ತು ವಿಭವದಿ । ಸುರರಾಜ ಸದ್ಭಕ್ತಿಯಿಂದ ॥ ೧ ॥ ಪರಿಪರಿ ಪೂಜಿಸುತೆರಗುತ್ತಲೆಂದನು । ಉರಿಯು ತುಂಬಿತು ಎಮ್ಮ ಪುರಕೆ ॥ ಪರಿಯಿದೇನೆನುತಲೆ ಬೆಸಗೊಳ್ಳೆ ಮುನಿಪಾಲ । ಸುರರಾಜನೊಡನೆಂದನಾಗ ॥ ೨ ॥ ಧರಣೀಯೊಳ್ ಪಂಢರಾಪುರದೊಳಗಿರುತಿಹ । ತರಳನೋರ್ವನು ಪುಂಡರೀಕ ॥ ವರಮಾತಾಪಿತೃಸೇವೆಗೆಯ್ಯುವನನುದಿನ । ಪರಮಭಕ್ತಿಯೊಳೆಡೆಬಿಡದೆ ॥ ೩ ॥ ಮಾತಾಪಿತರು ಪರಬ್ರಹ್ಮರೆಂದೆನುತಲಿ । ಈತ ಸೇವಿಸುವ ಕಾರಣದಿ ॥ ಸಾತಿಶಯದ ತಪರೂಪದಿಂದಾಸೇವೆ । ಭೂತಳ ಸುಡುವುದೀಗೆಂದ ॥ ೪ ॥

ರಾಗ ಮಾರವಿ ಏಕತಾಳ

ಎನಲಾ ನುಡಿಯನು ಕೇಳುತ ಸುರಪನು । ಕಿನಿಸಿನೊಳಾಕ್ಷಣದಿ ॥ ಮನುಜನ ಗರ್ವವ ಮುರಿಯುವೆ ಕ್ಷಣದಲಿ । ಯೆನುತಲೆ ಗರ್ಜಿಸಿದ ॥ ೧ ॥ ಪರಿಯನು ತಿಳಿಯುತ ನಾರದನೆಂದನು । ಮರುಳುಗೊಳದಿರಯ್ಯ ॥ ತೆರಳೀಕ್ಷಣದಲಿ ಮುರಹರನಲ್ಲಿಗೆ । ಅರುಹಿದರವ ಕಾವ ॥ ೨ ॥ ಹರಿಭಕ್ತನ ಪರಿಯರಿಯೆಯ ಪಿಂದಕೆ । ತರಳನು ಧ್ರುವನೆಂಬ ॥ ಗರುವದಿ ತಪವನು ಕೆಡಿಸುವೆನೆನುತಲಿ । ತೆರಳಿ ನೀ ಬಿಡಿಸಿದೆಯಾ ॥ ೩ ॥ ಎಂದಾನುಡಿಯನು ಕೇಳುತ ಸುರಪತಿ । ಚಂದದಿ ಸುಮನಸರ ॥ ಮುಂದಿಯ ಕೂಡುತ ವಂದಿಸಿ ಮುನಿಪಗೆ । ಬಂದನು ಗೋಕುಲಕೆ ॥ ೪ ॥

ಭಾಮಿನಿ

ತರಣಿಕೋಟಿಸಹಸ್ರತೇಜದಿ । ವರರತುನಗೋಪುರದಿ ರಂಜಿಪ । ಪುರಿಯುವೊಳಪೊಕ್ಕಾಗ ಸತಿಯರವೆರಸಿಯೋಲಗದಿ ॥ ಮೆರೆವ ಹರಿಯನು ಕಂಡು ಮಘವನು । ಸಿರಿಚರಣಕಭಿನಮಿಸೆ ವಿನಯದಿ । ಪರಿಕಿಸುತ ಮುರಹರನು ತಕ್ಕೈಸುತ್ತಲಿಂತೆಂದ ॥ ೧ ॥

ರಾಗ ಕಲ್ಯಾಣಿ ಅಷ್ಟತಾಳ

ಏನಯ್ಯ ಪುರುಹೂತ ನೀನು । ದು । ಮ್ಮಾನದೊಳಿಹ ಪರಿಯೇನು ॥ ಮಾನಸನಿಧಿಯೆ ನಿನ್ನ ವ್ಯಥೆಯನ್ನು ಎನ್ನೊಳು । ಸಾನುರಾಗದಿ ಪೇಳೆಂದೆನಲು ಕೈಮುಗಿಯುತ್ತ ॥ ೧ ॥ ಪರಮಾತ್ಮ ಕೇಳಯ್ಯ ದಯದಿ । ಎನ್ನ ।

ಕೊರತೆಯು ಪೇಳ್ವೆನು ಮುದದಿ ॥ ಧರೆಯೊಳು ಪುಂಡರೀಕನು ಎಂಬ ಬಾಲನು । ಹರುಷದಿಂದಲಿ ಮಾತಾಪಿತರನ್ನೆ ಸೇವಿಪ ॥ ೨ ॥ ಪಂಢರಾಪುರ ದೊಳಗಿವನು । ಬಲು । ಚಂಡವುಲೂಖನ ಸುತನು ॥ ಪುಂಡರೀಕಾಕ್ಷನೆ ಕೇಳೀತ ರಚಿಸುವ । ದಿಂಡತನಗಳನ್ನು ಏನೆಂಬೆ ಜೀಯಾ ॥ ೩ ॥

ಭಾಮಿನಿ

ಕಿರುನಗೆಯು ನಗುತಾಗ ಮುರಹರ । ತರಳ ಮಾತಾಪಿತರ ಸೇವೆಯು । ವಿರಚಿಸುವ ವಿಧವೆಂತು ಪೇಳೈ ಪರಿಗಳೆಲ್ಲವನು ॥ ಮರುಕವೇನಿದಕೀಗ ಲಿಂತೀ । ಪರಿಯು ಬೆದರಿಕೆ ಬೇಡ ವೇಗದಿ । ಕರುಣಿಸುವೆನಭಯುವನು ನಿಶ್ಚಯವಾಗಿ ನಾನೀಗ ॥ ೧ ॥

ರಾಗ ಕಾಂಭೋಜ ಅಷ್ಟತಾಳ

ಉದಯುದೊಳೇಳ್ವನು ಸದಮಲಾತ್ಮಕನೀತ । ದೇವ ಕೇಳು ॥ ಮುದದಿ ತಂದೆಗೆ ಉಷ್ಣಜಲವ ತಂದೀವನು । ದೇವ ಕೇಳು ॥ ೧ ॥ ತಂದೆತಾಯ್ಗಳ ಮುಖಕರಚರಣವನೆಲ್ಲ । ದೇವ ಕೇಳು ॥ ಚಂದದಿ ತೊಳೆಯುತ್ತ ಸೆರಗಿ ನಿಂದೊರೆಸುವ । ದೇವ ಕೇಳು ॥ ೨ ॥ ಹರುಷದೊಳಾಗ ಪ್ರದಕ್ಷಿಣೆಗೈವನು । ದೇವ ಕೇಳು ॥ ಚರಣವನೊತ್ತಿ ಸಂಸ್ತುತಿಸುವನನುದಿನ । ದೇವ ಕೇಳು ॥ ೩ ॥ ನಿರತ ತೈಲವನ್ನೊತ್ತಿ ಮಜ್ಜನಗೈಸುವ । ದೇವ ಕೇಳು ॥ ಭರದಿ ಷಡ್ರಸಯುಕ್ತ ಭೋಜ್ಯವ ರಚಿಸುವ । ದೇವ ಕೇಳು ॥ ೪ ॥ ಕುಶಲದೊಳವರಿಗೆ ಭೋಜನ ಗೈಸುವ । ದೇವ ಕೇಳು ॥ ಯುಸಕದಿಂದಲೆ ಎತ್ತಿ ಉಭಯರ ವೇಗದಿ । ದೇವ ಕೇಳು ॥ ೫ ॥ ವರವೀಳ್ಯವಿತ್ತು ಪರ್ಯಂಕದಿ ಮಲಗಿಸಿ । ದೇವ ಕೇಳು ॥ ಚರಣವನೊತ್ತಿ ನಿದ್ರಿಸಲು ಊಟಕೆ ಪೋಪ । ದೇವ ಕೇಳು ॥ ೬ ॥

ರಾಗ ಕಾಂಭೋಜ ಝುಂಪೆತಾಳ

ಈ ರೀತಿ ಸೇವೆಯನು । ಪೋರ ಗೆಯ್ವುದರಿಂದ । ಮೂರುಲೋಕ ಗಳವನ । ಚಾರುತಪಶಿಖಿಗೆ ॥ ಗಾರುಗೆಟ್ಟುದುಯೆಮ್ಮ । ಕೊರಳಿಗುಬ್ಬಸ ವಾಯ್ತು । ಪಾರಮಾರ್ಥಕಿ ದಯದೊ । ಳೈತಂದು ಸಲಹೊ ॥ ೧ ॥ ಸುರಪ ನೆಂದುದ ಕೇಳಿ । ಹರಿಯು ವೇಗದೊಳಾಗ । ಪೊರಟನಮರರು ಸಹಿತ । ಪಂಢರಾಪುರಕೆ ॥ ತೆರಳಿ ಬಂದಾ ಹರಿಯು । ಪುಂಡರೀಕನ ಗೃಹದ । ಹೊರ ಗಿನಂಗಳದೊಳಗೆ । ನಿಂತು ಪೇಳಿದನು ॥ ೨ ॥ ಕಂದ ಕೇಳೆಲೊ ಪುಂಡ । ರೀಕ ನಿನ್ನಯ ಮನಕೆ । ಇಂದು ನಾ ಮರುಳಾಗಿ । ಬಂದೆ ನೋಡಯ್ಯ ॥

ಬಂದು ಪರಿಕಿಸು ನಾನು । ಪುಂಡರೀಕಾಕ್ಷನೆನೆ । ಬಂದರೊಳ್ಳಿತು ನಿಲ್ಲು ನಿಲ್ಲೆನುತಲವನು ॥ ೩ ॥ ತಂದೆತಾಯ್ಗಳಿಗೀಗ । ಭೋಜನವಗೆಯ್ಸುವೆನು । ಅಂದವಲ್ಲವು ಇವರ । ತ್ಯಜಿಸಿ ಬರುತಿಹುದು ॥ ಮಂದಮತಿ ಕೂಗಬೇ । ಡೆಂದೆನುತ ಕೋಪದಲಿ । ಒಂದಿಟಿಗೆ ದುಂಡಯನು । ತೆಗೆದೆಸೆದ ಹರಿಗೆ ॥ ೪ ॥ ಶ್ರೇಷ್ಠ ಭಕ್ತನು ತನಗೆ । ಕೊಟ್ಟ ಪೀಠವನೆಂದು । ಇಟ್ಟಿಗೆಯ ಕಲ್ಲಿನೊಳು । ದಿಟ್ಟ ತಾ ನಿಂದ ॥ ಇಷ್ಟರಾಗಿಹ ಮಾತೃಪಿತರ ಭೋಜನ ಗೆಯಿಸಿ । ಪಟ್ಟೆ ಮಂಚದೊಳವರ । ಮಲಗಿಸುತಲಿರಲು ॥ ೫ ॥

ರಾಗ ಶಂಕರಾಭರಣ ಮಟ್ಟೆತಾಳ

ಹರಿಯು ನೋಡಿ ನಗುತಲಾಗ । ತರಳ ಬಾರೊ ಪುಂಡರೀಕ । ಮೆರೆವ ನಿನ್ನ ದೃಢಕೆ ಮೆಚ್ಚಿ । ಬಂದೆ ಶ್ರೀಹರಿ ॥ ೧ ॥ ವರವನೀವೆ ಬಾರೊ ಎನಲು । ಬರಿದೆ ಕೂಗಬೇಡ ನಮ್ಮ । ಪರಮಪಿತೃಗಳಿಂಗೆ ನಿದ್ರೆ । ಬಾರ ದಂದದಿ ॥ ೨ ॥ ಬರುವನಲ್ಲ ನಾನು ಈಗ । ಇರಲು ನೀನು ಒಂದು ಗಳಿಗೆ । ತೆರಳಿ ಬರುವೆನಯ್ಯ ಕಡೆಗೆ । ವರವನೀವುದು ॥ ೩ ॥ ಇರುಯಿರೀಗಲೆನಲು ವೃದ್ಧ । ವರವುಲೂಖನೆಂದ ಸುತನೆ । ಹರಿಯೆ ಬಂದು ಕರೆಯೆ ನೀನು । ಮರುಳನಂದದಿ ॥ ೪ ॥ ಇರುವುದುಚಿತವಲ್ಲ ನಮ್ಮ । ಕರೆದುಕೊಂಡು ಹರಿಯು ಬಳಿಗೆ । ತೆರಳೆನುತ್ತ ಮೇಲಕೆದ್ದು । ಕುಳಿತನಾಕ್ಷಣ ॥ ೫ ॥ ಭರದಿ ಮಾತಾ ಪಿತರ ಕರವ । ತರಳ ಪಿಡಿದು ಹೊರಗೆ ಬರಲು । ಸುರರು ಸಹಿತ ಪರಮ ಪುರುಷ । ನಿರಲು ಕಾಣುತ ॥ ೬ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹರುಷದಿಂದ ಉಲೂಖನೆರಗುತ । ಹರಿಯೆ ಎನ್ನಯ ತರಳ ನಿನ್ನನು । ಮರುಳುತನದಿಂ ಮನ್ನಿಸದೆ ಇನ । ನಿರುವನಿವನು ॥ ೧ ॥ ಕರುಣದಿಂ ಕೋಪಿಸದೆ ಮನ್ನಿಸು । ಹರಿ ನಮೋ ನಮೊ ಎನುತ ಚರಣಕೆ । ಪೊರಳುತಿಹ ಪಿತನನ್ನು ಕಾಣುತ । ತರಳನಾಗ ॥ ೨ ॥ ಧರೆಯೊಳಗೆ ಪೊರಳುವಿರಿ । ಸುಮ್ಮನೆ । ಸಿರಿಚರಣ ನೋಯುವುದು ವ್ಯರ್ಥದಿ । ಹರುಷದಲಿ ಮಂಚದಲಿ ಪವಡಿಸಿ । ಕರವ ಮುಗಿವೆ ॥ ೩ ॥ ಬರುವವರು ನಾವಲ್ಲ ಹರಿಯನು । ತೊರೆದುಪೋಗುವುದಿಲ್ಲವೆನುತಿರೆ । ತರಳ ತಾ ಹೊದ್ದಿರುವ ವಸನವ । ಧರೆ ಯೊಳ್ಹಾಸಿ ॥ ೪ ॥ ಹರಿಗೆ ವಂದಿಪರಿದರ ಮೇಲಕೆ । ಎರಗಿರೆನುತಿರೆ ಕಂಡು ಶ್ರೀಹರಿ । ತರಳನನು ತೆಗೆದಪ್ಪಿ ಪೇಳ್ದನು । ಹರುಷದಿಂದ ॥ ೫ ॥

ರಾಗ ತೋಡಿ ಅಷ್ಟತಾಳ

ಕಂದ ಬಾರೆನ್ನಯ್ಯ ಬಾ ಬಾ । ರೆಂದು ಶ್ರೀಹರಿ ಮುದ್ದಿಸುತ್ತಲೆ । ಚಂದದಿಂದಿಂತೆಂದ ಬಾಲಕಗೆ ॥ ನೊಂದೆ ನೀ ಬಲವಾಗಿ ನಿನ್ನಯ । ತಂದೆ ತಾಯ್ಗಳ ಸೇವೆಯಿಂದಲಿ । ಇಂದು ನಾ ಮೆಚ್ಚಿಹೆನು ನಿನಗಾಗಿ ॥ ೧ ॥ ಪರಮಮಾತಾಪಿತರು ಸಹಿತಲೆ । ಹರುಷದೊಳು ವೈಕುಂಠಪದವಿಗೆ । ತೆರಳಿ ಬಾರೈ ಶರಣ ನೀನೆನಲು ॥ ತರಳನಾಕ್ಷಣ ತನ್ನ ಸಲಹುವ । ಪರಮ ಪುರುಷನು ಈತನೆನ್ನುತ । ಧರಣಿಯೊಳಗೆರಗುತ್ತ ಸ್ತುತಿಸಿದನು ॥ ೨ ॥ ಹರಿಯೆ ನರಹರಿ ಕಂಸಮರ್ದನ । ದುರುಳಧೇನುಕಶಕಟಭಂಜನ । ಪರಮ ಪಾವನ ಭಕ್ತವತ್ಸಲನೆ ॥ ಧರೆಯೊಳೆನ್ನಯ ಬಿರುದು ಮೆರೆಯುವ । ತೆರದಿ ನೀನೀ ಪುರದಿ ನೆಲಸೈ । ನರಕಮಥನನೆ ಪಾಹಿ ಮುರಹರನೆ ॥ ೩ ॥

ಭಾಮಿನಿ

ಜಯ ನಮೋ ವಸುದೇವನಂದನ । ಜಯತು ಸಂಕರ್ಷಣ ನಮಸ್ತೇ । ಜಯ ಜಯಾ ಪ್ರದ್ಯುಮ್ನ ಮಹದನಿರುದ್ಧನಾಮಕನೆ ॥ ಜಯ ಚತುರ್ವಿಧ ಮೂರ್ತಿ । ಭಕ್ತಾ । ಶ್ರಯ ಭವಾಂಬುಧಿಮಗ್ನಜನಸಂ । ಶ್ರಯ ಸದಾ ನಂದೈಕವಿಗ್ರಹ ಜಯ ನಮೋ ಜಯತು ॥ ೧ ॥

ವಾರ್ಧಿಕ

ಸ್ವಾಮಿ ಕೇಳುತಲಾಗ ಭೂಮಿಯೊಳಗತ್ಯಧಿಕ । ಪ್ರೇಮಿಯಹ ಡಿಂಗರಿಗ ಪುಂಡರೀಕನ ಪೆಸರು । ಸೋಮಾರ್ಕರಿರುವವರೆಗಿರಲೆನುತ ತೋಷದಿಂ ಪಂಢರಾಪುರದೊಳಾಗ ॥ ಪ್ರೇಮದಿಂ ನೆಲೆಗೊಂಡು ಕಲೆಮಾತ್ರಕಾಕ್ಷಣವೆ। ಕಾಮಿನೀಪತಿಸುತರ ಮೂವರನ್ನೊಡಗೊಂಡು । ವ್ಯೋಮಕೇಶನ ಸಖನು ಗೋಕುಲಕೆ ನಡೆಯಲ್ಕೆ ವ್ಯೋಮದುಂದುಭಿ ಮೊಳಗಿತು ॥ ೧ ॥

ರಾಗ ಮಾರವಿ ಏಕತಾಳ

ಇತ್ತಲು ಮುರಹರ ಭಕ್ತರ ಸಲಹುತ । ಪೃಥ್ವಿಯೊಳಿರುತಿರಲು ॥ ಚಿತ್ತಜಮರ್ದನ ಧರೆಯ ಸಂಚರಿಸುವ । ಉತ್ತಮ ಮನದೊಳಗೆ ॥ ೧ ॥ ವೃಷಭನನೇರುತ ಪಾರ್ವತಿಯೊಡಗೊಂ । ಡೊಸುಧೆಯ ಕ್ಷೇತ್ರಗಳ ॥ ಕುಶಲದಿ ನೋಡುತ ಪಂಢರಿನಗರಕೆ । ಶಶಿಧರನೈತರಲು ॥ ೨ ॥ ಪರಮ ಪಂಢರಪುರ ಹೊರಗಿನುದ್ಯಾನದೊ । ಳಿರುತಿಹ ಸುಮಫಲವ ॥ ಗಿರಿಜೆಯು ಪರಿಕಿಸಿ ಹರುಷದೊಳೆಂದಳು । ಪುರಹರನೊಳು ನಗುತ ॥ ೩ ॥ ಮುಲ್ಲೆ ಮಲ್ಲಿಕಾ

ಜಾಜಿ ಸೇವಂತಿಕ । ಚೆಲ್ವ ಕೇತಕಿಸುಮವು ॥ ಬಿಲ್ವಪತ್ರೆಯು ಮೊದಲಾದುದ ಪರಿಕಿಸು । ತೆಲ್ಲವ ಕೊಯ್ದಾಗ ॥ ೪ ॥ ಪುರಹರ ನಿನ್ನನು ಪೂಜಿಪೆನೆನುತಲೆ । ಗಿರಿಜೆಯು ಧರೆಗಿಳಿದು ॥ ಪರಿಪರಿಪುಷ್ಪವ ಕೊಯ್ದುರಸಲು ಜಲ । ವಿರದಿರೆ ಮಜ್ಜನಕೆ ॥ ೫ ॥

ರಾಗ ನೀಲಾಂಬರಿ ಏಕತಾಳ

ಕೇಳೊ ದೇವ ಸುಮಗಳೆಲ್ಲವ । ನೋಡುತ್ತ ಮನ । ಕೋಳುಗೊಂಡು ಕೊಯಿದೆನೆಲ್ಲವ ॥ ಶೂಲಿ ನಿನಗರ್ಪಿಸುವೆನೆನುತಲಿ । ವಿಾಯುವ ಮನದಾ । ಮೇಲೆಯುರಸೆ ಜಲವ ನಾನಿಲ್ಲಿ ॥ ೧ ॥ ಇಲ್ಲವಯ್ಯಾ ಎಲ್ಲಿ ನೋಡಲು । ಸುಂದರ ವನದಾ । ಚೆಲ್ವಿಕೆಯು ಬರಿದೆ ಈಗಳು ॥ ಮಲ್ಲಸಹಪ ನೀನು ದಯಮೊಳು । ರಚಿಸಯ್ಯಾ ಕೊಳನ । ಎಲ್ಲಾ ಜನರಘ ಹರಿಸುವಂದದೊಳು ॥ ೨ ॥ ಎನಲು ಗಿರಿಜೆ ವಚನದಂದದಿ । ಪುರಹರ ತನ್ನ । ಘನ ತ್ರಿಶೂಲವನ್ನು ಸಂತಸದಿ ॥ ವನದಮಧ್ಯ ಬಗಿಯೆ ವೇಗದಿ । ಭಾಗೀರಥಿಯು । ವನಧಿಘೋಷದಿ ಬರಲು ತವಕದಿ ॥ ೩ ॥ ಗಿರಿಜೆ ನೋಡಿ ಮಿಂದು ಶುಚಿಯಲ್ಲಿ । ಹರನರ್ಚನೆಯು । ಹರುಷದಿಂದ ಗೈದಳಂದಲ್ಲಿ ॥ ಹರನೆ ದಿವ್ಯಸರಸಿಗೀಗಳು । ಕರುಣಿಸು ವರವ । ನರರ ಪಾಪ ಹರಿಸುವಂದದೊಳು ॥ ೪ ॥

ಭಾಮಿನಿ

ಗಿರಿಜೆಯೆಂದುದ ಕೇಳಿ ಪರಶಿವ । ಸರಸಿಯೊಳು ನಿರ್ಮಲದ ಚಿತ್ತದಿ । ನರರು ಮಜ್ಜನಗೈಯ್ಯಲಾಕ್ಷಣ ಕಾಯಸಹಿತವರು ॥ ತೆರಳುವರು ವೈಕುಂಠ ನಗರಿಗೆ । ಮುರಹರನ ಪಾದವನು ಸೇರುವ । ವರವನಿತ್ತಿಹೆನೆನುತ ತೆರಳಿದ ಪಾರ್ವತಿಯು ಸಹಿತ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಸರಸಿಗೆ ವರವಿತ್ತು ಪರಶಿವ ಕೈಲಾಸ । ಪುರಕೆ ಪೋಗಲಿಕಿತ್ತ ನರರು ॥ ಹರುಷದಿಂದಲೆ ತಂಡತಂಡದಿಂ ಬೈತಂದು । ಸರಸಿಯೊಳ್ಮಿಂದು ವೈಭವದಿ ॥ ೧ ॥ ಪರಮ ವೈಕುಂಠಮಂದಿರಕೆ ಪೋಗುತಲಿರೆ । ತೊರೆದು ಕಲ್ಮಷವ ಮೋಕ್ಷದೊಳು ॥ ಹರಿತಾಂ ದನೊಂದಿನ ಸರಸಿಗೆ ಹಿಮಕರ । ಪರಮ ಸಂತಸದಿ ಮಜ್ಜನಕೆ ॥ ೨ ॥ ಅಸಿತರೊಳ್ ಗುರುಪತ್ನಿಯಾದ ತಾರೆಯು ಸಹ । ವನಿತೆಯುತ್ಕರ್ಷದಿ ಸಂತಸದಿ ॥ ಘನಸರೋವರಕಾಗಿ ಬಂದು ಮಜ್ಜನಗೈದು । ಮುದಿಯುಟ್ಟು ನಿಂದಿರಲಾಗ ॥ ೩ ॥ ಮನದೊಳು ಮನಸಿಜನುರುಬೆ ನೋಡಲು

ಶಶಿ । ವನಿತೆಯ ರೂಪ ನೋಡುತಲಿ ॥ ಮನಸಿಜಸತಿಯೊ ಪೇಳ್ ವನಜ ಜನ್ಮಿಯ ವಧುವೊ । ವನಿತೆ ಯಾರಿವಳೆನ್ನುತಾಗ ॥ ೪ ॥

ವಾರ್ಧಿಕ

ಸುರರೊಳಗೆ ಉರ್ವಶಿಯು ತರುಣಿ ಮೇಸಕೆ ಮೇಲು । ಗಿರಿಜೆ ಲಕ್ಷ್ಮಿಯು ಮೇಲು ರೂಪುಸೌಭಾಗ್ಯದಲಿ । ಪರಿಕಿಸಿಹೆನವರ ಪರಿಯಲ್ಲಿವಳ ನೋಡಿದರೆ ಕರಗಿಪಳು ಎನ್ನ ಮನವ ॥ ತರುಣಿ ನಡೆಗಳುಕುವುದು ಹಂಸ ಕೋಕಿಲೆ ಮೌನ । ವೆರದು ಕುಳ್ಳಿಹುದಿವಳ ನುಡಿ ಕೇಳಿ ನಾಚುತಲೆ । ಮೆರೆವುತಿಹ ತುಂಗಕುಚಯುಗಪಂ ಪರಿಕಿಸುತ ಶಿರವೆತ್ತದೈ ಚಕ್ರವಾಕ ॥ ೧ ॥

ಭಾಮಿನಿ

ತರುಣಿಯುಳ ಮುಖ ನೋಡಲೆನ್ನಯ । ಪರಮ ಸೌಂದರ್ಯಗಳೆ ವ್ಯರ್ಥವು । ಸ್ಮರನು ದಹಿಪನು ಎನ್ನನೆನುತಲಿ ಕರಗುತಿರೆ ಮನದಿ ॥ ಪರಿಯ ನರಿಯುತ ತಾರೆ ತನ್ನೊಳ । ಗಿರವ ಸಿಲಿಸಿಹನಿವನ ಮೋಹಿಪೆ । ಮರುಳು ಗೊಳಿಸುವೆ ಯುಕ್ತಿಯೊಳು ತಾನೆನುತ ಹಂಬಲಿಸಿ ॥ ೧ ॥

ರಾಗ ಮಧುಮಾಧವಿ ತ್ರಿವುಡೆತಾಳ

ಮುನಿಗಳಿರ ಕೇಳಿಂತು ತಾರೆಯು । ಮನದಿ ಯೋಚಿಸಿ ರಜನಿ ಪತಿಯೊಳು । ವಿನಯದಿಂ ರಮಿಸುವೆನು ಎನುತಲೆ । ಹರುಷಗೊಳ್ಳುತ ಲಾಕ್ಷಣ ॥ ೧ ॥ ತೋರಿಸಪೆ ತನ್ನಿರವ ಬಂದಿಹ । ನಾರಿಯರನೆಲ್ಲರನು ಪಿಂದಕೆ । ಭೋರನಾಕ್ಷಣ ಕಳುಹಿಯೋರ್ವಳೆ । ಶಿರವ ತಗ್ಗಿಸಿ ನಿಂದಿರೆ ॥ ೨ ॥ ನೋಡಿದನು ಶಶಿಯೋರ್ವಳಿರುವುದ । ಪಾಡಿ ಪೊಗಳಿದ ತನ್ನ ದೈವವ । ಗಾಢದಿಂದಲೆ ಬಂದು ತಾರೆಯು । ಕೂಡಿ ವಿರಹದೊಳೆಂದನು ॥ ೩ ॥

ರಾಗ ಕಾಂಭೋಜ ಆದಿತಾಳ

ಕನ್ನೆ ನಿನ್ನ್ಯಾರೀಗ ಪೇಳು । ಎನ್ನ ಮನವ ಸೆಳೆಯುತಿರುವೆ । ಮುನ್ನ ಸ್ಮರನ ಹತಿಯನು ಮೋ । ಹನ್ನೆ ತಪ್ಪಿಸು ॥ ೧ ॥ ಹಿಮಕರೇಂದ್ರ ಕೇಳೊ ನಾನು । ಅಮರಗುರುವಿನರಸಿ ತಾರೆ । ಕುಮತಿ ಕೇಳ್ ಪತಿವ್ರತೆಯಾದೆನ್ನ । ಭ್ರಮೆಯ ಬಿಡು ಬಿಡು ॥ ೨ ॥ ಫುಲ್ಲನಯನೆ ಮೆರೆವ ನಿನ್ನ । ಚೆಲ್ವಿಕೆಯ ನೋಡೆ ಮನಸು । ತಲ್ಲಣಗೊಂಡಿಹುದು ಬೇಗ । ಉಲ್ಲಾಸ ಪಡಿಸು ॥ ೩ ॥ ಸುರರಿಗೆಲ್ಲ ಗುರುವು ಎನ್ನ । ಪರಮ ಪತಿಯು ಮೂರು ಜಗದೊಳ್ । ಸರಿ

ಯಾಗಿಹರ ಕಾಣೆನವನ । ಮೆರೆವ ಶೌರ್ಯಕೆ ॥ ೪ ॥ ಬಿಡು ಬಿಡು ಪಂಚಾಂಗ ಪಿಡಿವ । ಬಡವಿಪ್ರನ ಶೌರ್ಯವೆಲ್ಲ । ನಡೆವುದುಂಟೆ ಎನ್ನೊಡನೆ । ಜಡಜಲೋಚನೆ ॥ ೫ ॥ ಅರಿತರೆನ್ನ ಪತಿಯು ನಿನ್ನ । ಶಿರವನರಿವ ಹಲವು ಬಗೆಯೊಳ್ । ಸರಿಯಲ್ಲವೊ ನಿನಗೆ ಸರಸ । ತೆರಳೊ ಗಾಢದಿ ॥ ೬ ॥ ಪುಡದಿ ನೀ ಬಂದೆನ್ನ ರಮಿಸೆ । ಕಡೆಯೊಳ್ ನಿನ್ನಾ ಪತಿಯು ಗೈವ । ಸಡಗರವ ಕಾಂಬೆ ಬಾರೆ । ಜಡಜಲೋಚನೆ ॥ ೭ ॥ ಉಡುರಾಜನೆ ಕೇಳೊ ನೀನು । ಕಡುಮೂರ್ಖತೆಯೊಳ್ ನುಡಿದರೀಗ । ಕೆಡುವೆ ಕಡೆಗೆ ಬೇಡ ಸುಮ್ಮನೆ । ನಡಿಯೊ ತವಕದಿ ॥ ೮ ॥

ರಾಗ ಪುನ್ನಾಗ ಏಕತಾಳ

ಬಾಲೆನುಡಿಯನು । ಕೇಳಿ ಚಂದ್ರನು । ತಾಳಿ ಮೌನವ । ಮೇಲೊಂದು ಯುಕ್ತಿಯ ॥ ೧ ॥ ತ್ವರೆಯೊಳಿವಳನು । ಮರುಳು ಗೈವೆನು । ಸ್ಮರನ ಹತಿಯನು । ಪರಿಹರಿಸಿಕೊಂಬೆನು ॥ ೨ ॥ ಮೆರೆವ ಫಾಲ್ಗುನ । ಪರಮಪೂರ್ಣಿಮ । ಭರಿತಚಂದ್ರಮ । ಇರುವ ಕಾಂತಿವಿಭ್ರಮ ॥ ೩ ॥ ಮೂಢಮತಿಯಲಿ । ಷೋಡಶವ ಕಲೆಯಲಿ । ಮೂಡ್ದ ಹಿಮಕರ । ಮಾಡೆ ವೇಗ ಶುಭಕರ ॥ ೪ ॥ ಚಾರುದೇಹವ । ತೋರೆ ವೈಭವ । ತಾರೆ ಕಾಣುತ್ತ । ಮಾರಹತಿಗೆ ಬೀಳುತ್ತ ॥ ೫ ॥

ವಾರ್ಧಿಕ

ಸುಲಲಿತಾಂಗಚ್ಛವಿಯ ಹಿಮಕರನ ಪರಿಕಿಸುತ । ಲಲನೆ ಪತಿ ಭೀತಿಯಂ ತೊರೆದಾಗ ವಿರಹದಿಂ । ಬಳುಕುತಲೆ ನಡೆತಂದು ಸುಂದರಾಂಗನ ತನುವನಪ್ಪಿದಳು ಹರುಷದಿಂದ ॥ ಪುಳಕಿತಾನಂದದೊಳ್ ಚುಂಬಿಸಿ ಕುಚದ್ವಯವ । ಚೆಲುವನುರಕೊತ್ತಿ ಚೆಂದುಟಿಯ ಸೇವಿಸಿ ನಿಂದೆ । ಗೊಳಗಾಗಿ ಧೈರ್ಯದಿಂ ಬೆರೆಯುತಲೆ ಸಂತಸದಿ ತೆರಳಿದಳು ಶಶಿನಿಳಯಕೆ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ಚಂದ್ರನು ತಾರೆಯನು ಬೆರೆ । ಯುತ್ತ ಮೋದದೊಳಿರಲಿಕತ್ತಲು । ಚಿತ್ತದಲಿ ಯೋಚಿಸುತ ಗುರುವರ । ಪತ್ನಿ ಈಗ ॥ ೧ ॥ ಎತ್ತ ಪೋದಳು ಎಂದೆ ಪಾದರಿ । ಹೊತ್ತು ಹೋಯಿತು ಸ್ನಾನಕೈದಿದಳ್ । ಕತ್ತೆ ಹೆಂಗಸು ಎನುತ ಬಿಡಿಸಿದ । ಪುಸ್ತಕವನು ॥ ೨ ॥ ನೋಡಿದನು ಪ್ರಶ್ನೆಯನು ಗುರುವರ । ಗಾಢದಿಂದಲೆ ಕಪಡೆ ಎಣಿಸುತ । ಮಾಡಿದನು ಕೈಬೆರಳ ಗಣಿತವ । ಜೋಡಿಪತಿಯು ॥ ೩ ॥ ಕೆಟ್ಟಪಾಪಿಯು ಬಿಟ್ಟ ಮದನನ । ಅಟ್ಟುಳಿಯು

ದರ್ಪದಲಿ ಚಂದ್ರನ । ಮುಟ್ಟಿ ಜರೆದಳು ಭಂಡೆ ದುರ್ಮತಿ । ಭ್ರಷ್ಟೆ ಇವಳು ॥ ೪ ॥ ಶಿರವನರಿವೆನು ಉಪಪತಿಯು ಸಹ । ತರಿದು ಭೂತಗಳಿಂಗೆ ಭೋಜನ । ವಿರಿಸುವೆನು ಎನುತಾಗ ರೋಷದಿ । ಗುರುವರೇಣ್ಯ ॥ ೫ ॥ ನಡುವಿನೊಳಗುಟ್ಟಿರುವ ಧೋತ್ರದಿ । ಸಡಲುತಿಹ ಕಚ್ಚೆಯನು ಬಿಗಿದನು । ಬಿಡಿದನಾ ಪುಸ್ತಕದ ಗಂಟನು । ಪೊಡವಿಯೊಳಗೆ ॥ ೬ ॥ ಗೀರಿದನು ಗಂಧವನು ಫಣೆಯಲಿ । ಭಾರಿ ದಂಡವ ಪೆಗಲೊಳಿರಿಸುತ । ಸಾರಿದನು ಹಿಮಕರನ ನಗರಕೆ । ದಾರಿವಿಡಿದು ॥ ೭ ॥

ಭಾಮಿನಿ

ಗುರುವು ನಡೆತರಲಾಗ ಹಿಮಕರ । ತರುಣಿಯನು ಕೂಡುತ್ತಲಂತಃ । ಪುರದಿ ಮೆರೆಯುತ್ತಿರಲು ಗರ್ಜಿಸಿ ಕರೆಯಲಾಕ್ಷಣದಿ ॥ ಅರರೆ ಏನದ್ಭುತಗಳೆನ್ನುತ । ಭರದಿ ಹಿಮಕರ ಹೊರಗೆ ಬಂದುದ । ಪರಿಕಿಸುತ ಗುರುವರನು ಪೇಳಿದನಾಗ ರೋಷದಲಿ ॥ ೧ ॥

ರಾಗ ಮಾರವಿ ಏಕತಾಳ

ಎಲೆ ಎಲೆ ಪಾಮರನೆನ್ನಯ ಲಲನೆಯ । ಕಳವಿನೊಳಪಹರಿಸಿ ॥ ನಲಿಯುತಲಿರುತಿಹೆ ಗುರುಸತಿ ಎಂಬುವ । ಒಳವರಿಯದೆ ಭ್ರಾಂತಿ ॥ ೧ ॥ ಬಿಡು ಬಿಡು ಎನ್ನಯ ತರುಣಿಯನೀಕ್ಷಣ । ಹುಡುಗಾಟಿಕೆ ಬೇಡ ॥ ಬಡಬಡ ವಿಪ್ರರ ತೆರನಲ್ಲವೊ ಕೇಳ್ । ಕೆಡದಿರು ನೀ ಗಾಢ ॥ ೨ ॥ ಎಂದಾ ಗುರುವರ ವಚನವ ಕೇಳುತ । ಲಿಂದುವು ರೋಷದಲಿ ॥ ಎಂದಿಗು ಪರಸತಿಗಳುಪೆನು ಮೋಹಿಸಿ । ಬಂದಳೆ ಎನ್ನ ಸತಿ ॥ ೩ ॥ ಅಮರರು ಎನ್ನಯ ಸೇವೆಯ ರಚಿಪರು । ಅಮಿತ ಪರಾಕ್ರಮರು ॥ ಕ್ಷಮಿಸರು ನಿನ್ನಯ ಶಿರವನೆ ತರಿವರು । ರಮಣಿಯ ಕೊಡದಿರಲು ॥ ೪ ॥ ನಡೆ ನಡೆ ಸುಮ್ಮನೆ ತರುಣಿಯನೆಂದಿಗು । ಬಿಡುವವ ನಾನಲ್ಲ ॥ ಸಡಗರದಿಂ ನೀ ತಂದಿಹ ಸೇನೆಗೆ । ಬಡಿಸುವೆನೌತಣವ ॥ ॥ ೫ ॥ ಸಾರಿದೆ ಬಿಡು ಬಿಡು ನಾರಿಯ ಜೊತೆಯನು । ಸೇರಿರೆ ನೀನೀಗ ॥ ಭಾರಿಯ ಕಷ್ಟವು ಬರ್ಪುದು ಮುಂದಕೆ । ಘೋರನೆ ಶಪಿಸುವೆನು ॥ ೬ ॥ ಮೆಚ್ಚಿ ಬಂದವಳನು ಬಿಡೆ ನಾನೆಂದಿಗು । ಅಚ್ಯುತ ಹರ ಬರಲು ॥ ಹುಚ್ಚನೆ ನಿನ್ನಯ ಶಾಪವ ಪೊಂದಲು । ದುಶ್ಚರಿತಗಳಿಲ್ಲ ॥ ೭ ॥

ರಾಗ ಸಾಂಗತ್ಯ ರೂಪಕತಾಳ

ಗುರುವರನಾಗ ಯೋಚನೆಗೈದು ದುರುಳನು । ತರುಣಿಯು ಬರದಿರವನೊಡನೆ ॥ ಸರಿಯಲ್ಲ ಕ್ರೋಧವೆನ್ನಯ ಸತಿಯೊಳು ತಪ್ಪು । ತೋರುವುದು

ಶಪಿಸುವದೆಂತು ॥ ೧ ॥ ತಲೆಯನ್ನು ಕೆದರಿ ದಂಡವನೂರಿಕೊಳ್ಳುತ್ತ । ತಿರುಗಿ ನೋಡುತಲಡಿಗಡಿಗೆ ॥ ಸಲಿಲಧಾರೆಯು ಕಣ್ಣಿನೊಳು ಸುರಿಸುತಲಾಗ । ನಿಲುತ ಶ್ವಾಸವ ಬಿಡುತ ಬರಲು ॥ ೨ ॥ ಬರುತಿಹ ಗುರುವನ್ನು ಕಾಣುತ್ತ ಸುರಪತಿ । ತ್ವರಿತದಿ ಬಂದುಪಚರಿಸಿ ॥ ಮರುಕವೇನೆನಲಾಗಲೊರೆಸುತ್ತ ಕಂಗಳ । ಕೊರಗಿ ಶೋಕಿಸುತಲಿಂತೆಂದ ॥ ೩ ॥

ರಾಗ ಮಧುಮಾಧವಿ ತ್ರಿವುಡೆತಾಳ

ಲಾಲಿಸೈ ಶೋಕವನು ಸುರಪರ । ಪಾಲ ನೀ ದಯವಿಟ್ಟು ಎನ್ನಯ । ಗೋಳ ತಪ್ಪಿಸು ಒಡಲ ಉರಿಯನು । ಪೇಳ್ವೆ ನಡೆದುದ ಲಾಲಿಸೊ ॥ ೧ ॥ ಎನ್ನ ಸತಿ ತಾರೆಯನು ಹಿಮಕರ । ಗನ್ನಗತಕನು ಕದ್ದು ಒಯ್ದನು । ಚೆನ್ನವಾಗಿಯೆ ಮದನಸುಖವನು । ಕನ್ನೆಯೊಡನೆ ಗೆಯ್ಯುತ ॥ ೨ ॥ ಇರಲು ಬಹುಪರಿ ನೀತಿ ಪೇಳಿದೆ । ದುರುಳನದ ಲೆಕ್ಕಿಸದೆ ಇರುವನು । ಪರಮಪಾಪಿಯು ಸದೆದು ತರುಣಿಯ । ಕರುಣಿಸೈ ನೀ ದಯದಲಿ ॥ ೩ ॥

ರಾಗ ಘಂಟಾರವ ಏಕತಾಳ

ಎಂದ ಮಾತನು ಕೇಳುತ್ತ ಸುರಪಾಲ । ನಂಧಕಾರಿಯ ತೆರದಿ ಗರ್ಜಿಸು । ತೆಂದ ಗುರುವರಗಾಕ್ಷಣ ॥ ೧ ॥ ಬಿಡು ಬಿಡೈ ಗುರು ಚಿಂತೆಗಳೆಲ್ಲವ । ಕಡುಮದಾಂಧನ ಮುರಿದು ನಿನ್ನಯ । ಮಡದಿಯನು ಕರೆತರುವೆನು ॥ ೨ ॥ ಎನುತ ಮನ್ನಿಸಿ ಚಿತ್ರಸೇನಾಖ್ಯನ । ಘನ ಜವದಿ ಕರೆಯುತ್ತ ಪೇಳಿದ । ನನಿಮಿಷಾಧಿಪನಾಕ್ಷಣ ॥ ೩ ॥

ಭಾಮಿನಿ

ಚಿತ್ರಸೇನನೆ ಪೋಗು ವೇಗದಿ । ವ್ಯರ್ಥ ಗುರುಸತಿಗಳುಪಿ ಚಂದ್ರನು । ಮಿತ್ರಮಂಡಲಿಯೊಳಗೆ ದ್ವೇಷವ ರಚಿಸನದರಿಂದ ॥ ಅರ್ತಿಯೊಳು ತಾರೆಯನು ಗುರುಪದ । ಕಿತ್ತು ವಂದಿಸೆ ಬಾಳಿದಪೆ ನೀ । ಶತ್ರುವಾಗದಿರೆನುತ ನೀತಿಯ ಬೆಸಸಿ ಬಾರೆನಲು ॥ ೧ ॥

ದ್ವಿಪದಿ

ಚಿತ್ರಸೇನಾಖ್ಯನದ ಕೇಳಿ ಪಡಿಲದಲಿ । ಗೋತ್ರಪಾಲಕನಿಂಗೆ ಎರಗಿ ತ್ವರಿತದಲಿ ॥ ೧ ॥ ಬರುತಿರಲು ಚಂದ್ರನೆಡೆಗನಕ ಗುರುಸತಿಯು । ಮರುಗಿ ಹಿಮಕರಗೆಂದಳಾಗ ಸಂಗತಿಯು ॥ ೨ ॥ ಸುರರೆಲ್ಲರಂ ಕೂಡಿ ಪತಿಯು ತಾನೀಗ ॥ ಬರುತಿಹನು ಸಮರಕೆಂದೆನುತಲತಿ ಬೇಗ ॥ ೩ ॥ ನವಮೋಹ

ನಾಂಗ ಪೇಳ್ ಮುಂದಿನೆತ್ನಗಳ । ತವಕದಿಂದಲಿ ನೀನು ಮಾಳ್ಪ ಕಾರ್ಯಗಳ ॥ ೪ ॥ ಅರುಹಬೇಕೆಂದೆನುತಲೆರಗೆ ಶೋಕದಲಿ । ತರುಣಿಗತಿ ಧೈರ್ಯಗಳ ಪೇಳ್ದ ಮೋಹದಲಿ ॥ ೫ ॥

ರಾಗ ಕಲ್ಯಾಣಿ ಆದಿತಾಳ

ತರುಣೀ ಕೇಳೀ । ಹರುಷ ತಾಳೀ । ಮನ । ಮರುಗಬೇಡ ಶೀಲೇ ॥ ॥ ಪ ॥ ಸ್ಮರನರಸಿಯ ಹಿಂಜರಿಯುವ ಸುಂದರ । ಪರಮಾಪ್ತಳೆ ನೀ ಕೇಳೀ ಗೊಯ್ಯನೆ ॥ ಅ ॥ ಛಲವನು । ಬಿಡು ನಿರ್ಜರರನು । ಈಕ್ಷಣದಲಿ ಬರಲಳುಕೆನು । ಭಾರ್ಗವನನು ನಾನೊಲಿಪೆನು ॥ ನಲಿಯುತ । ಸ್ಮರನಂಘವಣೆಯ ಸಲಿಸುತ । ತರುಣಿಯೆ ನಿನ್ನನು ಕೂಡುತ । ಗೆಲವಿನೊಳ್ ಶುಕ್ರನ ದಯದೊಳಗೆಲ್ಲರ । ಸುಲಲಿತಾಂಗಿ ಸಂಹಾರವ ಗೆಯ್ಯುವೆ ॥ ೧ ॥ ಮೆರೆವೆನು । ಗುರುಸೇನೆಯ ಸಂ । ಹರಿಪೆನು । ಹಿಮಕರ ಸಂಗರ ಪರಿಯನು । ಸುರಪಗೆ ಮನದೊಳ್ ಸ್ಮರಿಸೆನು । ಧುರದೊಳ್ ಸಾಹಸ ತೋರ್ಪೆನು ॥ ಅರಿತುಕೋ । ಭೀತಿಯನೆಲ್ಲವ ಕಳೆದುಕೋ । ತರುಣಿಯೆ ಎನ್ನನು ನಂಬಿಕೋ । ಒರೆಯುತಲೀಪರಿ ಶುಕ್ರನ ನೆನೆಯಲು । ಹರುಷದಿ ನಲಿಯುತ ಬೇಗೈತರುತಿರೆ ॥ ೨ ॥

ಕಂದ

ಕರದೊಳ್ ದಂಡವ ಧರಿಸುತ । ತ್ವರಿತದಿ ಭಾರ್ಗವನೈತರೆ ಕಾಣುತ ಚಂದ್ರಂ ॥ ಚರಣಕೆ ನಮಿಸಲ್ ಪೊಗಳುತೆ । ಕರೆದಂದವನರುಹೆನಲಿಂತೆಂದನು ಭಯದಿಂ ॥ ೧ ॥

ರಾಗ ಕಾಪಿ ಅಷ್ಟತಾಳ

ಕೇಳು ಶುಕ್ರಾಚಾರ್ಯ ಮಾತ । ನಾನು । ಪೇಳುವುದೆಲೆ ದೈತ್ಯಪ್ರೀತ ॥ ಲೋಲಾಕ್ಷಿ ಗುರುಸತಿ ತಾರೆ ಎಂಬುವಳೆನ್ನ । ನೋಲೈಸಿ ಮೋಹದಿ ಬಂದು ಸೇರಿರ್ಪಳು ॥ ೧ ॥ ಗುರುವರನರಿತು ಈ ಪರಿಯ । ಬಂ । ದೊರೆದನು ಬಿಡು ಎಂದು ಸತಿಯ ॥ ಪರಿಪರಿಯುಸಿರಲು ಚರಣ ನಂಬಿದಳನ್ನು । ತೆರಳಿಚುವವನಲ್ಲ । ವೆನೆ ಕೋಪದಿಂದಾಗ ॥ ೨ ॥ ಸುರರೆಲ್ಲ ಕೂಡೀಗ ಬಂದು । ಎನ್ನ । ಶಿರವನ್ನು ತರಿಯುವೆನೆಂದು ॥ ಗುರುವರ ತೆರಳಲು ಗೆಲುವರೆಯಾತನ । ಪರಮಕೌಶಲ ನೀನೆ । ಸರಿ ಎಂದು ನೆನೆದೆನು ॥ ೩ ॥ ಕರುಣದಿ ರಕ್ಷಿಸು ಎನ್ನ । ನೀನು ಪರಮಪರಾಕ್ರಮಿ ಮುನ್ನ ॥ ಸುರರನ್ನು ಮರ್ದಿಸಿ ಸೌಖ್ಯದೊಳೆನ್ನನು । ಇರಿಸುವಂದದ ಮಾಡು । ತರುಣಿಯನೊಡಗೊಂಡು ॥ ೪ ॥

ಭಾಮಿನಿ

ಅಡಿಗೆ ವಂದಿಸುತಿರ್ಪ ಚಂದ್ರನಿ । ಗಡಿಗಡಿಗೆ ಧೈರ್ಯವನು ಪೇಳುತ । ದೃಢದಿ ನೆನೆದನು ಮೇಘದುಂದುಭಿ ಎಂಬ ದಾನವನ ॥ ಕಡುದುರುಳ ಪಾತಾಳವಾಸನು । ಸಿಡಿಲತೆರದಲಿ ಒದರಿ ಕರ್ಬುರ । ಪಡೆಯು ತರುಬುತ ಬಂದು ಶುಕ್ರನ ಚರಣಕೊಂದಿಸುತ ॥ ೧ ॥

ರಾಗ ಭೈರವಿ ಏಕತಾಳ

ಯಾತಕೆ ಕರೆಸಿದೆ ಎನ್ನ । ಭೃಗು । ಜಾತನೆ ಪೇಳ್ ನೀ ಮುನ್ನ ॥ ಯಾತುಧಾನರನೊಡಗೊಂಡು । ತವ । ಜಾತರು ಬಂದಿದೆ ದಂಡು ॥ ೧ ॥ ಎನುತಿಹ ದೈತ್ಯಗೆ ಉಶನ । ತನ್ನ । ಮನದೊಳಗಿರುತಿಹ ವ್ಯಸನ ॥ ಘನತೆಯೊಳರುಹಲು ಕೇಳಿ । ಆ । ದನುಜನು ತೋಷವ ತಾಳಿ ॥ ೨ ॥ ಜಳ್ಳು ಸುರೇಂದ್ರನ ಬಲವ । ಬಿಡೆ । ವೆಳ್ಳಿನಷ್ಟಾದರು ಕುಲವ ॥ ಮುಲ್ಲ ಸಹಸ್ರೈ ನಾವು । ಶಶಿ । ತಳ್ಳಿಯೆ ಸಾಕೆನಿಸುವೆವು ॥ ೩ ॥ ಎನುತಿಹ ಖಳನನು ನೋಡಿ । ಕವಿ । ಘನತರ ಮನ್ನಣೆ ಮಾಡಿ ॥ ಅನುವಿನೊಳ್ ಶಶಿಪುರ ಸುತ್ತ । ನೀ । ದನುಜರ ನಿಲಿಸೈ ಮತ್ತಾ ॥ ೪ ॥ ಎಂದಾಜ್ಞಾಪಿಸೆ ಕೇಳಿ । ಮುದ । ದಿಂದಲೆ ರಾಕ್ಷಸಮೌಳಿ ॥ ಚಂದಿರನಗರದ ಸುತ್ತ । ಮದ । ದಂಧರ ನಿಲಿಸಲ್ಕತ್ತ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಹಿಮಕರನೀಪರಿ ದನುಜರ ನೆರಹುತ್ತ । ಅಮರೇಂದ್ರ ಭೀತಿಯೊಳು ॥ ಅಮಿತ ಪರಾಕ್ರಮಿ ಭಾರ್ಗವನೊಡಗೂಡಿ । ಸಮರವ ಯೋಜಿಸಿರೆ ॥ ೧ ॥ ಸುರಪಾಲನಾಜ್ಞೆಯೊಳ್ ಗಂಧರ್ವಸೇನಾನಿ । ವರಚಿತ್ರಸೇನನಾಗ ॥ ತ್ವರಿತದೊಳ್ ನಡೆತಂದು ಪರಿಕಿಸೆ ಚಂದ್ರನ । ಪುರದೊಳು ಖಳರವಿಂಡ ॥ ೨ ॥ ಕರದೊಳು ಖಡ್ಗವ ಪೊತ್ತು ಕೋಟೆಯ ಕಟ್ಟೆ । ಮರುತನು ಚಲಿಸದಂತೆ ॥ ದುರುಳರಾತ್ರಿಂಚರಪಡೆಯನ್ನು ನೋಡುತ್ತ । ಶಿರವನ್ನು ತೂಗುತ್ತಲೆ ॥ ೩ ॥ ಧರಿಸುತ್ತಲಣುರೂಪ ಚಿತ್ರಸೇನಾಖ್ಯನು । ಅರಮನೆಯೊಳಗೆ ಸಾರ್ದು ॥ ತರುಣಿಯನೊಡಗೊಂಡು ಮೆರೆವ ಚಂದ್ರನ ಪಾದ । ಕೆರಗುತ್ತಲಿಂತೆಂದನು ॥

ರಾಗ ಪಂತುವರಾಳಿ ಅಷ್ಟತಾಳ

ಏನಯ್ಯಾ । ಚಂದ್ರ । ಏನಯ್ಯಾ ॥ ಪ ॥ ಏನಯ್ಯ ಚಂದ್ರ ಸು । ಜ್ಞಾನವಂತನೆ ಗುರು । ಮಾನಿನಿಯನು ಕೂಡಿ । ಹೀನತನದೊಳಿರ್ಪೆ ॥ ಅ ॥

ಅಮರಾಧಿಪತಿ ನಿನ್ನ ಬಳಿಗೆ ಹೋಗೆಂದು । ಸುಮತಿಯಿಂದೆನ್ನನು ಕಳು ಹಿದನಿಂದು । ಗಮಿಸಿಹೆನದರಿಂದ ವೇಗದೊಳಿಂದು । ಹಿಮಕರ ಬಿನ್ನಪ ಕೇಳ್ ಗುಣಸಿಂಧು ॥ ೧ ॥ ಅತ್ರಿಮಹಾಮುನಿನೇತ್ರದಿ ಜನಿಸಿ । ಪೃಥ್ವಿ ಪಾಲಿಸುವೆ ಸಮರ್ಥನೆಂದೆನಿಸಿ ॥ ಧಾತ್ರಿಭಾರಕವಾದ ಕೃತ್ಯವ ಗೈಸಿ । ವ್ಯರ್ಥ ಮೂಜಗ ದಪಕೀರ್ತಿಯ ಧರಿಸಿ ॥ ೨ ॥ ನೀತಿಯಲ್ಲವು ಗುರುಪತ್ನಿಯ ಭೋಗ । ಖ್ಯಾತ ನೀ ಕೆಡಬೇಡ ಸಾರಿದೆನೀಗ ॥ ಪಾತಕವದರಿಂದ ಬಿಡು ಬಿಡು ಬೇಗ । ಯಾತಕೊ ಸುರರೊಳು ಧುರವೈಭೋಗ ॥ ೩ ॥ ನಡತೆಯಿಂದಲಿ ಸತಿಯಳನು ನೀ ಬಿಟ್ಟು । ಕೊಡುವುದಾದರೆ ಹೇಳು ಎನ್ನೊಳು ಗುಟ್ಟು ॥ ಬಿಡದಿರ್ದ ರಿಕೊ ನೋಡು ಹೋದೆ ನೀ ಕೆಟ್ಟು । ವೊಡನೆ ಸಾರಿದೆ ಗಂಟ ಸೆರಗಿಲಿ ಕಟ್ಟು ॥ ॥ ೪ ॥ ಅಗಣಿತ ಸುರರು ತಾವೆಲ್ಲರು ಕೂಡಿ । ಬಗೆಯಿಂದ ಕಳುಹಿದರೆನ್ನ ಮಾತಾಡಿ ॥ ಸುಗುಣ ನಿನ್ನಯ ಮನದೊಳಗೆ ನೀ ನೋಡಿ । ಮುಗುದೆಯ ಬಿಡು ಬಿಡು ಜಗದೊಳು ಪ್ರೌಢಿ ॥ ೫ ॥

ಭಾಮಿನಿ

ಹಿತವನರುಹಿದ ಚಿತ್ರಸೇನನ । ಅತಿಶಯದ ಸಿರಿವಾಕ್ಯ ಚಂದ್ರನ । ಧೃತಿಗೆ ತಗಲಿತು ಕರಿಯು ಕಂಡಾರ್ಭಟಿಪ ಹರಿಯಂತೆ ॥ ಖತಿಗೊಳುತಲಿಂತೆಂದ ನಾಕ್ಷಣ । ಸತಿಯು ಬಿಡುವವನಲ್ಲ ಇಂದ್ರನ । ಪಿತನು ತಾತನೆ ಬರಲಿ ನೋಡುವೆ ಹೋಗು ಹೋಗೆಂದ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಚಂದ್ರನೆಂದುದ ಕೇಳಿ ಚಿತ್ರಸೇನಾಖ್ಯನು । ಸುಂದರಿಯನು ಬಿಡ ದಿರಲು ॥ ಬಂದುದು ಕಡೆಗಾಲ। ವೆನುತ ಪೇಳುತಲಾಗ । ಲಿಂದ್ರನ ಬಳಿಗೈದಿ ಪೇಳ್ದ ॥ ೧ ॥ ಎಷ್ಟು ಪೇಳ್ದರು ತನ್ನ । ಇಷ್ಟಳಾಗಿಹಳನ್ನು । ಬಿಟ್ಟೇವನಲ್ಲ ತಾನೆಂದ ॥ ದಿಟ್ಟ ನಿನ್ನಯ ತಾತ । ಪಿತನೂ ಬಂದರೆ ತಾನು । ಕುಟ್ಟಿ ಸಂಹರಿಪೆನಿಂತೆಂದ ॥ ೨ ॥

ರಾಗ ಕೇದಾರಗೌಳ ಝಂಪೆತಾಳ

ಕಿಡಿಸೂಸಿ ಸುರಪಾಲನು । ದಿಕ್ಪಾಲ । ಪಡೆವೆರಸಿ ಬಹುಶೂರನು ॥ ಕಡಿವೆ ಕಂಠವನೆನ್ನುತ । ಶಶಿಪುರಕೆ । ನಡೆತಂದನುರವಣಿಸುತ ॥ ೧ ॥ ಭೇರಿಕಹಳಾರವದಲಿ । ಪುರದ ಪ್ರಾ । ಕಾರದೊಳು ಗರ್ಜನೆಯಲಿ ॥ ಘೋರನೈತಹ ಸುರರನು । ಧಿಕ್ಕರಿಸಿ । ಶೂರ ಖಳರಿರೆ ಸುರಪನು ॥ ೨ ॥

ಮುರಿದು ಕೋಟಿಯ ಸಹಸದಿ । ಮುಂದರಿದು । ಬರುವ ದಿವಿಜರ ತ್ವರಿತದಿ ॥
ಪರಿಕಿಸುತಲಾ ದೈತ್ಯರು । ಶರಮಳೆಯ । ಸುರಿಸಿ ಬೊಬ್ಬಿಡುತಿರ್ದರು ॥ ೩ ॥

ಭಾಮಿನಿ

ಕತ್ತರಿಸಿ ಕ್ರೋಧದಲಿ ವಿಶಿಖವ । ಚಿತ್ರಸೇನನು ದನುಜರನು ಸು । ಗ್ಗೊತ್ತಿ ಸದೆಯುತಲಿರಲು ಕಾಣುತ ಮೇಘದುಂದುಭಿಯು ॥ ಕೃತ್ತಿವಾಸನ ತೆರದಿ ಘೋರ್ಗರೆ । ಯುತ್ತ ಶೂಲವ ತಿರುಹಿ ಘಡ ಘಡ । ಧೂರ್ತ ನಿಲ್ಲೆನು ತಾಗಲಿರಿದನು ಗಜರಿ ಗರ್ಜಿಸುತ ॥ ೧ ॥

ರಾಗ ಭೈರವಿ ಏಕತಾಳ

ಎಲೆಲೆ ನಿಶಾಚರ ಕೇಳು । ಶಿರ । ವಿಳುಹುವೆ ಧರಣಿಗೆ ತಾಳು ॥ ಕಲಿಯಹೆ ನಾ ನೋಡೆನುತ । ಶರ । ಮಳೆಯನು ಕರೆಯೆ ಬೊಬ್ಬಿಡುತ ॥ ೧ ॥ ಜಾರೆಯರೊಳು ಸುಧೆಗುಡಿವ । ಎಲೆ । ಪೋರನೆ ನೀನೀ ಧುರವ ॥ ಹಾರೈಸಿದೆ ಗಂಧರ್ವ । ಯೆನುತೇರಿಸಿ ಬಿಟ್ಟನು ಶರವ ॥ ೨ ॥ ಬಂದಸ್ತ್ರವ ಪರಿಹರಿಸಿ । ಮಗು । ೞಿಂದನು ಶರಮಳೆ ಸೂಸಿ ॥ ಮಂದಮತಿಯೆ ನೀನೀಗ । ಬಹು । ನಿಂದಿಪೆ ಕೊಲುವೆನು ಬೇಗ ॥ ೩ ॥ ಎನಲಾ ಖಳ ಕೋಪದಲಿ । ತಾ । ೞಿನುತಲಿ ಬಹು ಶೌರ್ಯದಲಿ ॥ ಕಣೆಯನು ಬಿಲ್ಲಿಗೆ ಪೂಡಿ । ಶಿರ । ಕನುವಿಂದೆಸೆವನು ನೋಡಿ ॥ ೪ ॥ ಚಿತ್ರಸೇನಾಖ್ಯನು ಬೇಗ । ಬಹ । ಶಸ್ತ್ರದ ಹತಿಯೊಳಗಾಗ ॥ ಧಾತ್ರಿಯೊಳೊರಗಲು ಕಂಡು । ಶಿಖಿ । ಯುತ್ತರಿಸಿದ ಮುಂಕೊಂಡು ॥ ೫ ॥

ರಾಗ ಮಾರವಿ ಮಟ್ಟೆತಾಳ

ಘೋರ ದೈತ್ಯನೆನ್ನ ಸಹಸ । ನೋಡು ನೋಡೆಲೊ ॥ ಧೀರಹವ್ಯವಹನನೆನ್ನ । ಕೇಳಿ ಬಲ್ಲೆಲೊ ॥ ೧ ॥ ಆರರೆ ನೀನೆಷ್ಟರವನೆ । ಸುತ್ತಲಾಕ್ಷಣ ॥ ಶರವ ಸುರಿದ ಕ್ರೋಧದಿಂದ । ಕುಣಪಭೋಜನ ॥ ೨ ॥ ಕಿಡಿಯ ಸೂಸು ತಗ್ನಿಯಾಗ । ಧಡಿಗ ದೈತ್ಯನೆ ॥ ಕಡಿವೆ ಕಂಠವೆನುತ ಶಕ್ತಿ । ಯೆಸೆದ ವೇಗನೆ ॥ ॥ ೩ ॥ ಬರುವ ಶಕ್ತಿಯನ್ನು ಮಧ್ಯ । ಪಥದಿ ಮುರಿಯುತ ॥ ಪರಿಘದಿಂದ ಖಳನು ಬಡಿದ । ನಾಗ ಗಜರುತ ॥ ೪ ॥ ಶಿರವ ಕಂಪಿಸುತ್ತಲಗ್ನಿ । ಯುರುಳಿ ಕಾಣುತ ॥ ತೆರಳಿ ಧನಪನಾಗ ಮಾ । ರ್ಮಲೆತು ಗಜರುತ ॥ ೫ ॥

ರಾಗ ಮಾರವಿ ಏಕತಾಳ

ಘಡ ಘಡ ಕರ್ಬುರ ನಿನ್ನಯ ಶೌರ್ಯವು । ನಡೆಯದು ಎನ್ನೊಡನೆ ॥ ಕೆಡವಿರು ಸಾರಿವೆ ನಡಿ ನಡಿ ಹಿಂದಕೆ । ಬಿಡುವೆನು ಕರುಣದಲಿ ॥ ೧ ॥ ಖವ

ಖವಿಸುತಲಾ ಖಳಪತಿ ಸಮರದಿ । ಭವವಿಧಿಗಂಜುವೆನೆ ॥ ಜವದೊಳು ನಿನ್ನಸು ತೊಲಗಿಸಿ ತೆರಳುವೆ । ಸವನಿಸು ಶಸ್ತ್ರಗಳ ॥ ೨ ॥ ದುರುಳನ ವಚನವ ಲಾಲಿಸಿ ಧನಪನು । ಕೆರಳುತ ಹೂಂಕರಿಸಿ ॥ ತಿರುಹುತ ಖಡ್ಗವನೆಸೆಯಲು ಚೂರ್ಣಿಸಿ । ಧರೆಯೊಳಗಿಕ್ಕಿದನು ॥ ೩ ॥ ಯಕ್ಷೇಶನು ಗದೆಗೊಂಡಾಗಸುರನ । ವಕ್ಷಕೆ ತೂಗಿಡಲು ॥ ಅಕ್ಷಿಯು ತಿರುಹುತ ಕೋಣಪ ಕೋಪದಿ । ತಕ್ಷಣ ಖಂಡಿಸಿದ ॥ ೩ ॥ ನಿಟಿಲಾಕ್ಷನ ಸಖ ಮುಸಲದಿ ದೈತ್ಯನ । ಚಟುಳತ್ವದೊಳಿರಿಯೆ ॥ ಕಟಕಟ ದಂತವ ಕಡಿಯುತ ಕರ್ಬುರ । ಹಟದೊಳು ಖತಿವೆರಸಿ ॥ ॥ ೪ ॥ ತೋರ್ಯೆ ಸಹಸವನೆನುತಲೆ ಶೂಲದಿ । ಭೋರನೆ ಉರಕಿರಿಯೆ ॥ ಧೀರ ಕುಬೇರನು ಮೂರ್ಛಿಸಿ ಭುವನವ । ಸಾರಿದ ಕ್ಷಣದೊಳಗೆ ॥ ೫ ॥

ಭಾಮಿನಿ

ಘೋರದಾನವನಿಂತು ಸುಮನಸ । ವಾರವನು ಬರಿಗೈದು ಕ್ಷಣದೊಳು । ಶೂರತನದಿಂ ಮೆರೆವುತಿರೆ ಕಂಡಾಗಲಾರ್ಭಟಿಸಿ ॥ ವಾರಿಧಿಯು ಕಲ್ಪಾವಸಾನದಿ । ಭೋರಿಡುವ ತೆರನಂತೆ ಸುರಪತಿ । ಯಾರುಭಟಿಸುತ ಬಂದು ಖಳಗೆದುರಾಗಿ ಮಾರಾಂತ ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ದನುಜನು ಕಂಡು ಹೂಂಕರಿಸುತ್ತ । ಬಹು । ಕಿನಿಸಿನೊಳಸ್ತ್ರವ ಸುರಿಸುತ್ತ ॥ ವನಿತೆಯೊಳಾಸೆಯನಿಡದಿರು । ಸುರ । ವನಿತೆಯರೊಡನೆ ಗರ್ವವ ತೋರು ॥ ೧ ॥ ಬಂದ ಶರವ ತುಂಡುಗೆಯ್ಯುತ್ತ । ಖಳ । ಗೆಂದನು ಬಲುಮೆ ತೋರೆನ್ನುತ್ತ ॥ ಹೊಂದಿಪೆ ನಿನ್ನಾಯುರ್ದಾಯವ । ಎನು । ತಿಂದ್ರ ಬಿಟ್ಟನು ಘನವಜ್ರವ ॥ ೨ ॥ ಒಡನಾಗ ಖಳಪತಿ ನೋಡಿದ । ನಿಲ್ಲ । ಲೆಡೆಗಾಣದೆ ಬೇಗವೋಡಿದ ॥ ಅಡರಿ ಅಂಬರದಲ್ಲಿ ಬಿಟ್ಟನು । ಬಹು । ಬೆಡಗಿನೊಳ್ ಮಾಯಕಶರವನ್ನು ॥ ೩ ॥

ವಾರ್ಧಿಕ

ಧಡಿಗದೈತ್ಯನ ಮಾಯೆ ಪೊಡವಿ ಕಂಪಿಸುವಂತೆ । ಸಿಡಿಲಗರ್ಜನೆಯಾಗಿ ಅಡರಿದವು ನಾಲ್ದೆಸೆಗೆ । ಬಿಡದೆ ಕತ್ತಲೆಯಾಗಿ ಗಿಡಮರವು ಕಲ್ಗಳುರೆ ಎರಗುತಿರೆ ಭೋರ್ಗರೆಯುತ ॥ ಸುಡುವ ಶಿಖಿ ಧಗಧಗಿಸೆ ಕಡುಭಯಂಕರ ಸಿಂಹ । ತುಡುಕಿ ಶಾರ್ದೂಲಗಳು ಒಡನೆ ಪುಲಿಕರಡಿಗಳು । ನಡುವೆ ವಿಷಜಂತುಗಳು ಘುಡುಘುಡಿಸಿ ತರುಬುತಿರೆ ಸುರಸೈನ್ಯ ತರಹರಿಸಲು ॥ ೧ ॥

ಭಾಮಿನಿ

ದುರುಳಖಳನೀ ಪರಿಯು ಮಾಯದಿ । ಸುರರ ಕಂಗೆಡಿಸುತ್ತಲಿರುತಿರೆ । ಸುರಪ ಯೋಚಿಸುತಿರಲು ಗುರುವರನರಿತು ವೇಗದಲಿ ॥ ಹರಿಪದಾಂಬುಜ ವನ್ನು ನೆನೆಯುತ । ತ್ವರಿತದಿಂ ನಾರಾಯಣಾಸ್ತ್ರವ । ದುರುಳಮಥನಕೆ ಮಂತ್ರಿಸುತ್ತಲೆ ಕೊಡೆ ಸುರೇಶನಿಗೆ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ವರಮುಹಾಸ್ತ್ರವ ಬಿಲ್ಲಿಗೇರಿಸಿ । ಹರುಷದಿಂ ಬಿಡಲಾಗಲಂಬರ । ಕಡರಿ ದುರುಳನ ಶಿರವನರಿಯುತ । ತಿರುಗಿ ಬರಲು ॥ ೧ ॥ ರವಿಯು ಉದಯಾ ಚಲಕೆ ಬಂದಿಹ । ವಿವರವೆನೆ ಮೂಜಗಕೆ ಸಂತಸ । ಲವಲವಿಕೆ ಹೆಚ್ಚಿದುದು ಕ್ಷಣದಲಿ । ದಿವಿಜಬಲದಿ ॥ ೨ ॥ ಅನಿತರೊಳು ಗುರುವರನು ತನ್ನಯ । ವನಿತೆ ಕೈಸಿಕ್ಕಿದಳು ಎನ್ನುತ । ಘನತರದ ತೋಷದಲಿಯುರಮನೆ । ಯೊಳಗೆ ಪೊಗಲು ॥ ೩ ॥ ಕಾಣುತಾಕ್ಷಣ ಶುಕ್ರ ಕೋಪದಿ । ಜಾಣನೆನ್ನನು ಗೆದ್ದು ಮುಂದಕೆ । ಮಾಣು ಮಾಣೆನುತಾಗ ಸಮರಕೆ । ಬಂದು ನಿಂದ ॥ ೪ ॥

ರಾಗ ಮಾರವಿ ಏಕತಾಳ

ಕೆರಳುತಲಾಗ ಬೃಹಸ್ಪತಿ ಎಲೆಯೆಲೆ । ದುರುಳ ನಿಶಾಪತಿಯು ॥ ಪರಿ ಸೇವಿಸುವೆಯ ಯಾಕಿಲ್ಲಿರುತಿಹೆ । ಒರೆಯೆಲೊ ಪಾಮರನೆ ॥ ೧ ॥ ಗುರು ನಿನ್ನರಸಿಯನುಡುರಾಜಗೆ ನಾ । ಸ್ಥಿರಗೊಳಿಸಲು ಮುದದಿ ॥ ಹರಿತಂದಿಹೆ ನೀ ನಡಿ ನಡಿ ಪಿಂದಕೆ । ಬರಿ ಭ್ರಾಂತಿಗಳೇಕೊ ॥ ೨ ॥ ಕಡಿಯುವೆ ಕಂಠವ ಮೊದಲಲಿ ನಿನ್ನಯ । ಕಡೆಯೊಳು ಹಿಮಕರನ ॥ ಒಡಲನೆ ಭೇದಿಪೆ ಬಿಡೆ ನಾನೆಂದಿಗು । ಮಡದಿಯನೆಳತಹೆನು ॥ ೩ ॥ ದಿಟ್ಟತನವ ತೋರೆನುತಲೆ ಶುಕ್ರನು । ಮುಷ್ಟಿಯ ಬಲಿಯುತಲಿ ॥ ಸಿಟ್ಟಿನೊಳೆರಗಲು ಗುರುವಬ್ಬರಿಸುತ । ಕುಟ್ಟಿದ ಪ್ರತಿಹತಿಯ ॥ ೪ ॥ ಕೆರಳುತ ಕಾಲಾಂತಕನಂದದಿ ಕವಿ । ತ್ವರಿತದಿ ಪಾಶವನು ॥ ತಿರುಗಿಸಿ ಗುರುವಿನ ಕರಚರಣವ ಬಿಗಿ । ದುರುಳಿಸುತಲೆ ಭರದಿ ॥ ೫ ॥ ತೋರೆಲೊ ವಿಕ್ರಮವೆಲ್ಲಿದೆ ನಿನ್ನಯ । ನಾರಿಯು ಕರೆ ಬೇಗ ॥ ಕಾರುಣ್ಯದಿ ಸೆರೆಬಿಡಿಸುವಳೆನುತಲಿ । ಸಾರಿದ ಭಾರ್ಗವನು ॥ ೬ ॥

ರಾಗ ಮಧುಮಾಧವಿ ತ್ರಿವುಡೆತಾಳ

ಗುರುವರನು ಕಂಗೆಡುತಲಾಕ್ಷಣ । ಸುರಿವ ನೇತ್ರೋದಕವ ಸೆರಗಿನೊ । ಳೊರೆಸಿ ಚಿಂತಾಶರಧಿಯೊಳು ತಾ । ಪೊರಳಿ ಹಮ್ಮಯಿಸುತ್ತಲಿ ॥ ೧ ॥

ತರುಣಿಯುಳ ಮೋಹದಲಿ ಎನಗೀ । ಪರಿಪರಿಯ ಕಷ್ಟಗಳು ಬಂದಿತು । ಸುರರ ಗುರುವೆಂದೆನಿಸಿ ನಿಂದೆಗೆ । ಹರಿದು ಬದ್ಧಿಹೆನೆನ್ನುತ ॥ ೨ ॥ ಕಷ್ಟ ದಿಂವಲೆ ಸತಿಯ ಬಿಡಿಸುತ । ಲಿಟ್ಟುಕೊಂಡರೆ ಪ್ರಾಯವೆನ್ನನು । ಬಿಟ್ಟು ಪೋಯಿತು ಯಾಕೆ ಮಾನವ । ಕೆಟ್ಟು ಸಮರವ ಗೈದೆನು ॥ ೩ ॥ ಬಿಡುವು ದೊಳ್ಳಿತು ಕಡುಮದಾಂಧಳ । ಪೊಡವಿಯೊಳು ಹೇಸಿಕೆಯ ಜನಗಳು । ಅಡಿಗಡಿಗೆ ನಿಂದಿಪರು ಎನುತಿರೆ । ಒಡನೆ ಕಾಣುತ ಸುರಪನು ॥ ೪ ॥

ರಾಗ ಕೇದಾರಗೌಳ ಝಂಪೆತಾಳ

ಗುರುರಾಯ ಬಿಡು ವ್ಯಥೆಯನು । ನಾನೀಗ । ದುರುಳನನು ಸಂಹರಿಪೆನು ॥ ತರುಣಿಯನು ತಂದೀಯುತ । ನಿನ್ನ ಮನ । ಹರುಷಪಡಿಸುವೆ ಸಂತತ ॥ ೧ ॥ ಎನುತ ವಜ್ರವ ಝಡಿಯುತ । ಬಂಧಿಸಿದ । ಘನಪಾಶ ಮುರಿದಿಕ್ಕುತ ॥ ಕಿನಿಸಿನಿಂದೊಳಪೊಗುತಲಿ । ಹಿಮಕರನ । ರಣಕೆ ಕರೆದನು ರವದಲಿ ॥ ೨ ॥ ಸುರರಾಜಗರ್ಜನೆಯನು । ಕೇಳಿ ಮನ । ಮರುಗಿ ತಾರೆಯು ಶಶಿಯನು ॥ ಬರಸೆಳೆದು ಬಿಗಿಯಪ್ಪುತ । ಕಡುಭೀತಿ । ವೆರಸಿ ಪೇಳ್ದಳು ನಡುಗುತ ॥ ೩ ॥

ರಾಗ ತುಜಾವಂತು ಝಂಪೆತಾಳ

ಲಾಲಿಸೆನ್ನಯ ನುಡಿಯ । ಲೀಲೆಯಿಂದಲಿ ಪ್ರೀಯ । ಕೇಳುತಿದೆ ರಣಭೇರಿ । ಕಹಳೆಗಳು ರವದಿ ॥ ಲೋಲ ನಿನ್ನನು ಬಿಟ್ಟು । ಬಾಳುವೆನೆ ಅರೆ ನಿಮಿಷ । ಕೋಳುಗೊಂಡುದು ಈಗ । ಖೂಳ ಗುರುವಿಂದ ॥ ೧ ॥ ರಮಣಿ ಕೇಳೆಲೆ ಶೀಲೆ । ವಿಮಲೆ ನೀ ಮರುಗದಿರೆ । ಅಮರೇಂದ್ರದರ್ಪವನು । ಸಮರದೊಳು ಮುರಿವೆ ॥ ಕಮಲಲೋಚನೆ ಕೇಳೆ । ಅಮಿತವಿಕ್ರಮಿ ಶುಕ್ರ । ನಮರರಿಗೆ ಬೆದರುವನೆ । ಯಮನೆ ಬರಲಿವಗೆ ॥ ೨ ॥ ಪರಮಸುಂದರ ನೀನು । ಧುರಕೆ ಪೋದರೆ ಜಯವು । ನಿರತವ್ಯಾರಿಗೆ ಬಹುದೊ । ಒರೆಯಲಳವಲ್ಲ ॥ ಮೆರವಷ್ಟದಿಕ್ಪಾಲ । ಸುರರು ಶೌರ್ಯದಿ ನಿನಗೆ । ಸರಿಯುರವರೀಗ ಕೇಳ್ । ಸುರತಸುಖಕರನೆ ॥ ೩ ॥ ಅಷ್ಟದಿಕ್ಪಾಲಕರ । ಶ್ರೇಷ್ಠತೆಯನೀಕ್ಷಣದಿ । ಕುಟ್ಟಿ ಬರುವೆನು ನೋಡು । ದಿಟ್ಟತನಗಳನು ॥ ತಟ್ಟನಾಕ್ಷಣ ಪೇಳಿ । ಸತಿಯ ನಪ್ಪುತ ಮುತ್ತ । ಕೊಟ್ಟು ವೇಗದಿ ಪೊರಟ । ರಣಕೆ ಹಿಮಕರನು ॥ ೪ ॥ ಬಂದು ನೋಡಿದ ಸುರರ । ವೃಂದದಲಿ ಮೆರೆಯುತಿಹ । ಇಂದ್ರನ ಕಾಣುತಾ । ಚಂದ್ರ ರೋಷದಲಿ ॥ ಇಂದು ಎನ್ನೊಳು ಧುರವ । ಮಂ ಬುದ್ಧಿಯ ನೆಗಳಿ । ಸಂದಿಹಾಯುಷ್ಯ ದೇ । ವೇಂದ್ರ ನಿನಗೆನುತ ॥ ೫ ॥

ರಾಗ ಭೈರವಿ ಅಷ್ಟತಾಳ

ಕದನಕೆ ನಿಂದಿರುವ । ಚಂದ್ರನ ನೋಡಿ । ಕುದಿವ ಕೋಪದಿ ಮಘವ ॥ ಮದಮುಖ ಗುರುಪತ್ನಿ ಎಂಬುದನರಿಯದೆ । ಮುದದಿ ಕೂಡಿದ ಪಾಪಿಯೆ ॥ ॥ ೧ ॥ ಬಲ್ಲೆ ನಿನ್ನಯ ಭಕ್ತಿಯ । ಭಾವದೊಳು ಆ । ಹಲ್ಯೆ ಕೂಡಿದ ಯುಕ್ತಿಯ ॥ ಚೆಲ್ವದೇಹದೊಳೆಲ್ಲ ಯೋನಿಸಹಸ್ರವ । ನುಲ್ಲಾಸದಿಂ ಪಡೆದೆ ॥ ॥ ೨ ॥ ಎಲೆ ಬ್ರಹ್ಮದ್ವೇಷಿ ನೀನು । ದಕ್ಷಬ್ರಹ್ಮ । ಮುಳಿದು ಶಾಪವನಿತ್ತನು ॥ ಲಲನೆಯರೊಳಗೋರ್ವಳಿಂಗೆ ನೋತುದರಿಂದ । ಚೆಲುವಿಕೆ ಬಿಟ್ಟುಪೋಯ್ತು ॥ ॥ ೩ ॥ ಬಲ್ಲೆ ವೃತ್ರಾಸುರನ । ಬ್ರಾಹ್ಮಣಸುತ । ನಲ್ಲವೆ ಪೇಳವನ ॥ ಕೊಲ್ಲಲು ನಿನಗಾಗ ಬ್ರಹ್ಮಹತ್ಯ ಘಟಿಸಿತು । ಖುಲ್ಲ ನೀ ಬ್ರಹ್ಮದ್ವೇಷಿ ॥ ೪ ॥ ಶರಧಿಯ ಮಥನದೊಳು । ಮೋಹಿನಿಗಾಗ । ತರಳೆಯು ಬೆಸವೆ ಕೇಳು ॥ ಕೊರಳ ಕೊಯ್ಸಿದೆ ಸಿಂಹಿಕಾತ್ಮಸಂಭವನನ್ನು । ಅರಿಯಾದ ನಿನಗವನು ॥ ೫ ॥ ದುರುಳರ ಮರ್ದಿಸಲು । ಶ್ರೀಹರಿಗೆ ನಾ । ನೊರೆದಿಹುದ್ಯೆಸೆ ಕೇಳು ॥ ಸುರರಂತೆ ಕುಳಿತಿಹ ಸಿಂಹಿಕಾತ್ಮಜನನ್ನು । ಕೊರಳಕೊಯ್ಸಿದೆ ಸಹಜ ॥ ೬ ॥ ನುಡಿ ಚಾತುರ್ಯಗಳೆಲ್ಲವ । ಬಲ್ಲೆನು ಎನು । ತೊಡನೆ ಮಹಾಶರವ ॥ ಬಿಡಲಾಗ ಚಂದ್ರನ ರಥ ಪುಡಿಪುಡಿಯಾಗಿ । ಪೊಡವಿಗೆ ಬೀಳೆ ಕಂಡು ॥ ೭ ॥ ಖತಿಯೊಳು ಗರ್ಜಿಸುತ । ಏರುತ ಪ್ರತಿ । ರಥವನ್ನು ತಾರಾನಾಥ ॥ ಅತಿಶಯ ಮಂತ್ರಾಸ್ತ್ರ ಬಿಡಲಾಗ ಸುರಪತಿ । ಕ್ಷಿತಿಯೊಳು ಮೂರ್ಛೆ ತಾಳ್ದ ॥ ೮ ॥

ರಾಗ ಭೈರವಿ ಏಕತಾಳ

ಸುರಪತಿ ಮೂರ್ಛಿಸಲಾಗ । ಕಂ । ದುರುತರ ಶೌರ್ಯದಿ ಬೇಗ ॥ ಗುರುಸತಿಮುಖಮಂ ನೋಡಿ । ಶಶಿ । ಹರುಷದಿ ಶಿರವೊಲೆದಾಡಿ ॥ ೧ ॥ ದಿವಿಜೇಶನ ಗತಿ ನೋಡೆ । ಇವ । ಬವರದಿ ಮಲಗಿಹ ಪ್ರೌಢೆ ॥ ತವಕದಿ ನಡೆವೊಳಗೀಗ । ಎಲೆ । ಯುವತಿಯೆ ರಮಿಸುವ ಬೇಗ ॥ ೨ ॥ ಎನುತಲಿ ಸತಿಯನು ಮುದದಿ । ಶಶಿ । ಘನತೆಯೊಳಪ್ಪುತ ಭರದಿ ॥ ಮನುಮಥ ಸುರಪಣೆಗಾಗ । ತನ್ನ । ತನುವನೊಪ್ಪಿಸಿದ ಬೇಗ ॥ ೩ ॥ ಶಿರವೆತ್ತುತ ಶಚಿ ವರನು । ತಾ । ಪರಿಕಿಸೆ ನಾಲ್ದೆಸೆಗಳನು ॥ ಇರದಿರೆ ತಾರಾಧಿಪನು । ಮನ । ಮರುಗುತ ದಿವಿಜೇಶ್ವರನು ॥ ೪ ॥

ಭಾಮಿನಿ

ಹರ ಹರಾ ಚಂದ್ರನೊಳು ಸಮರದಿ । ಒರಗಿದೆನು ಮೂರ್ಛೆಯಲಿ ಎನ್ನನು । ಸುರರು ನಿಂದಿಸದಿಹರೆ ಗುರುದಾರಗಿತ್ತೆ ಭಾಷೆಯನು ॥ ಬರಿದೆ

ಎನ್ನಯ ಬಾಳ್ವೆಯಾದುದೆ । ಒರಗಿಹರು ದಿಕ್ಪಾಲರೆಲ್ಲರು । ದುರುಳಸೀತನ ಸಹಸವೆಂತುಟೊ ಹರಮಹಾದೇವಾ ॥ ೧ ॥

ಕಂದ

ಸುರಪತಿ ಚಿಂತಿಪ ಪರಿಯ । ಸ್ಮರಿತಾ ಗುರುವರ ವೇಗದಿ ಕಮಲಜ ನೆಡೆಗಂ ॥ ಹರಿತಂದರುಹಲ್ ವಿಧಿಯಂ । ಕರಗುತ ಮನದೊಳ್ ಪದ್ಮಜ ಹಿಮ ಕರನೆಡೆಗೈತಂದಂ ॥ ೧ ॥

ಭಾಮಿನಿ

ಇಂದ್ರ ಚಂದ್ರನ ಪುರದೊಳಪಜಯ । ದಿಂದ ಶೋಕಿಪ ಪರಿಯ ನೋಡಿಯು । ಪೇಂದ್ರನಾತ್ಮಜನೆತ್ತಿ ತಕ್ಕೈಸುತ್ತಲಿಂತೆಂದ ॥ ಇಂದ್ರ ಸೈರಿಸು ಕುಮುದಬಾಂಧವ । ಗಿಂದು ನೀತಿಯನೊರೆದು ಗುರುವಿನ । ಮಂದಗಾಮಿನಿ ಯಳನು ಕೊಡಿಸುವೆನೆನುತಲಾ ಕ್ಷಣದಿ ॥ ೧ ॥

ರಾಗ ಬೇಗಡೆ ಆದಿತಾಳ

ಎಂದು ಧೈರ್ಯವ ಪೇಳಿ ಕಮಲಜನು । ಉಡುರಾಜನಿಂಗೆ । ಚಂದ ದಿಂದಲೆ ಒರೆದ ನೀತಿಯನು ॥ ಅಂದವಲ್ಲವು ಗುರುವರೇಣ್ಯನ । ಸುಂದ ರಾಂಗಿಯ ಭೋಗ ನಿನಗೀ । ಮಂದಬುದ್ಧಿಯು ಜೇಡ ಬಿಡು ಬಿಡು । ಕುಂದು ವುದು ಸತ್ಕೀರ್ತಿ ಲೋಕದಿ ॥ ೧ ॥ ಎನಲು ಕೇಳುತ ಚಂದ್ರ ವೇಗದಲಿ । ಪರಮೇಷ್ಠಿಯಡಿಗೆ । ವಿನಯದಿಂ ನಮಿಸುತ್ತ ಭಕ್ತಿಯಲಿ ॥ ವನಿತೆ ಗರ್ಭಿಣಿ ಯಾಗಿಯಿರ್ಪಳು । ತನುಜನುದ್ಭವಿಪನಕ ಎನ್ನೊಳು । ವಿನಯದಿಂದಿರೆ ಬಿಡುವೆ ಮೇಲಕೆ । ಚಿನುಮಯಾತ್ಮಕ ಕೇಳು ಮುದದೊಳು ॥ ೨ ॥ ಶಶಿಯು ಪೇಳ್ದಂದವನು ಲಾಲಿಸುತ । ದಿವಿಜೇಂದ್ರಗುರುವು । ಎಸೆವ ಕಣ್ಣೀರುಗಳ ಕೆಡಹುತ್ತ ॥ ಉಸಿರದಿರು ಈ ತಾರೆ ಎನ್ನಲಿ । ಕುಶಲದೋಳಗಿರುತಿರುವ ಕಾಲಕೆ । ಪಸರಿಸಿಹುದೈ ಗರ್ಭವೆನ್ನದು । ಅಸಮವಿಕ್ರಮ ತೋರ್ಪೆ ಯಾತಕೆ ॥ ೩ ॥ ಗುರುವರೇಣ್ಯನ ನುಡಿಯ ಕೇಳುತ್ತ । ಉಡುರಾಜನೆಂದಾ । ತರುಣಿಗರ್ಭವು ತನ್ನದೆನ್ನುತ್ತ ॥ ಪರಿಪರಿಯ ವಾದಿಸುತಲುಭಯರು । ಪರಮಕ್ರೋಧವ ತಾಳಿ ಕಾಣುತ । ಲೊರೆದ ಕಮಲಜನೊಂದುಪಾಯವ । ನಿರತ ಕ್ರೋಧವ ಸೈಸಿರೆನ್ನುತ ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ತರುಣಿಯ ಗರ್ಭದೊಳಿರುತಿಹ ಶಿಶುವನ್ನು । ಕರೆದು ಕೇಳಿವನೆಜನು ॥ ಗುರುವಿನ ಗರ್ಭವೊ ಹಿಮಕರಜನ್ಮಿಯೊ । ತ್ವರಿತದಿ ಪೇಳೆನಲು ॥ ೧ ॥

ಎನ್ನ ಉದ್ಭವ ಚಂದ್ರನಿಂದಲಿಯೆನೆ ಕೇಳು । ತೆಂದ ಬೃಹಸ್ಪತಿಯು ॥ ನಿನ್ನ ದೃಷ್ಟಿಗೆ ಬಿದ್ದ ಜನಗಳು ಲೋಕದಿ । ಮುನ್ನ ಬಾಳದೆ ಪೋಗಲಿ ॥ ೨ ॥ ಎನು ತಲೆ ಶಪಿಸಲಾಕ್ಷಣದೊಳು ತಾರೆಗೆ । ಘನವೇದನೆಗಳಾಗಲು ॥ ಮನದೊಳು ಕರಗುತ್ತ ಮುಖವು ಬಾಡಿರೆ ಕಂಡು । ವನಿತೆಯರೆಲ್ಲ ಬಂದು ॥ ೩ ॥ ಕರೆದಂತರಂಗದಿ ಕುಳ್ಳಿರಿಸುತ್ತಲಿ । ವಿರಚಿಸೆಯುಪಚರ್ಯವ ॥ ಪರಮ ಶುಭೋದಯ ಕಾಲದೊಳ್ ಜನಿಸಿದ । ತರಣಿಶೋಭೆಯೊಳ್ ತರಳ ॥ ೪ ॥ ಜನಿಸಿದ ಕುವರನ ಕಂಡು ಹಿಗ್ಗುತಲಾಗ । ವನಿತೆಯು ವೇಗದಿಂದ ॥ ವನಜ ಜನ್ಮಿಯು ಮುಂದೆ ತಂದಿಳುಹಲು ಬುಧ । ನೆನುತಭಿದಾನ ಗೈದ ॥ ೫ ॥

ರಾಗ ಭೈರವಿ ಝಂಪೆತಾಳ

ದಿನಕರನ ತೆರನಂತೆ । ಮಿನುಗುತಿಹ ಕುವರನನು । ವಿನಯದಿಂದೆತ್ತಿ ಗುರು । ಮುದ್ದಾಡುತಿರಲು ॥ ಘನವೇಗ ಹಿಮಕರನು । ತನಯನನು ಸೆಳ ಕೊಂಡು । ವನಜಜನ್ಮಿಗೆ ನಮಿಸಿ । ತೆರಳಿದನು ಒಳಗೆ ॥ ೧ ॥ ಕಡುಕೋಪ ದಲಿ ಗುರುವು । ಉಡುರಾಜರೂಪುಗಳು । ಅಡಗಿಪೋಗಲಿ ಎಂದು । ಶಪಿಸೆ ಕ್ರೋಧದೊಳು ॥ ಮಡದಿಯನು ಕರೆಯಲ್ಕೆ । ಪೊಡವಿಯೊಳಗೆನಗೀಗ । ಕಡುಪತಿವ್ರತೆ ಎಂಬ । ವರವ ಕೊಡೆ ಬರುವೆ ॥ ೨ ॥ ನಸುನಗುತ ಪರ ಮೇಷ್ಠಿ । ಯುಸಿರಿದನು ಬುಧನಿಂದ । ಶಶಿವಂಶದಭಿವೃದ್ಧಿ । ಗಾಗಿಂಥ ವಿಧಿಯು ॥ ಎಸಗಿದುದು ಕಾರ್ಯಗಳು । ಪತಿವ್ರತೆಯರೊಳಗಿನ್ನು । ವಸುಧೆ ಯೊಳು ನೀ ಮೇಲು । ತೆರಳೆಂದು ಕಳುಹೆ ॥ ೩ ॥ ಬಿಸಜಗಂಧಿನಿಯಾಗ । ಬಿಸಜಜಾತನ ಅಡಿಗೆ । ಕುಶಲದಿಂ ಪೊಡಮಟ್ಟು । ಪತಿಗೆ ವಂದಿಸುತ ॥ ಶಶಿಯು ಹಂಬಲ ಮರೆದು । ತೆರಳಿದಳು ಗೃಹಕಿತ್ತ । ವಸುಧೆಯೊಳು ಪೊರಳುತ್ತ । ಚಂದ್ರ ಶೋಕಿಸಿದ ॥ ೪ ॥

ರಾಗ ಸಾವೇರಿ ಆದಿತಾಳ

ತರುಣಿ ಪೋದುದ ಕಾಣುತ್ತ । ಚಂದ್ರನು ಮನ । ಕರಗಿ ವ್ಯಥೆಯ ತಾಳುತ್ತ ॥ ಪೊರಳುತ್ತ ಧರಣಿಯಲಿ । ಹಲುಬುತ್ತಲಾಗ । ಸ್ಮರನ ತಾಪಕೆ ಬಳಲಿ ॥ ೧ ॥ ಯಾಕೆ ಪೋದೆನೊ ಸರಸಿಗೆ । ಈ ಸತಿಯು ತಂದು । ಪೋಕ ನಾಡೆನು ಇಂದೀಗ ॥ ಸಾಕುವದೆಂತು ಬಾಲನ । ಪೊಂದಿತು ಇನ್ನು । ಶೋಕ ವಾರಿಧಿಪತನ ॥ ೨ ॥ ಗುರುಪತ್ನಿ ಎಂಬುದರಿಯದೆ । ಮೂರ್ಖತ್ವದಿಂದ । ಜರಿದೆ ನೀತಿಯ ಕೇಳದೆ ॥ ಗುರುರಾಯ ಶಪಿಸಿದನು । ಪೋದುದು ಕಾಂತಿ ।

ಸುರರು ನಿಂದಿಪರೆನ್ನನು ॥ ೩ ॥ ಪರಸತಿಯಳ ಮೋಹವು । ಎನ್ನನು ಕಂಡು । ಮರೆಯುಲಿ ಲೋಕವೆಲ್ಲವು ॥ ಮರುಗಿದರೇನಹುದು । ಪರಬ್ರಹ್ಮನಿರಲು । ಕೊರತೆಗಳೀಗ ಪೋಪುದು ॥ ೪ ॥

ಭಾಮಿನಿ

ಗುರುಪರನ ಶಾಪದಲಿ ಚಂದ್ರನು । ಸೊರಗಿ ಮರುಗುತ ಬಂದು ವೇಗನೆ । ಸರಸಿಜೋದ್ಭವನಡಿಗೆ ವಂದಿಸಲಾಗ ಪೇಳಿದನು ॥ ಪರಮಮಂಗಲ ಕೇಳು ನಿನ್ನಯ । ಕರದಿ ಕೊಡುವೆನು ಲೋಹದಂಡವ । ಧರೆಯ ತೀರ್ಥದಿ ತೇಲಲಲ್ಲಿಯೆ ಪಾಪಪರಿಹರವು ॥ ೧ ॥

ರಾಗ ಸಾಂಗತ್ಯ ಝಂಪಕತಾಳ

ಇತ್ತು ಲೋಹದ ದಂಡವತ್ರಿಯಾತ್ಮಜನಿಂಗೆ । ಸತ್ಯಲೋಕಕೆ ಪೋಗಲಜನು ॥ ಇತ್ತಲಾ ಸುರರನ್ನು ಕೂಡಿ ಬೃಹಸ್ಪತಿ । ಸ್ವಸ್ಥದೊಳಿರುತಿರೆ ಚಂದ್ರ ॥ ॥ ೧ ॥ ಪೊತ್ತುಕೊಂಡಾ ಲೋಹದ ದಂಡವ ಶಿರದೊಳು । ಉತ್ತಮ ಕ್ಷೇತ್ರಗಳ್ ಚರಿಸಿ ॥ ಮತ್ತೆ ಬಂದನು ಪುರಹರಗೈದ ಸರಸಿಗೆ । ಚಿತ್ತಜಪಿತನ ಧ್ಯಾನಿಸುತ ॥ ೨ ॥ ಬಿಡಲು ಲೋಹದ ದಂಡ ತೇಲುತ್ತಲಿರೆ ಕಂಡು । ಕಡುತೋಷದಿಂದ ಸ್ನಾನವನು ॥ ನೃಡನ ಪಾದೋದಕವೆನುತಲಿ ಮುಳುಗಲು । ಒಡನೆ ತೇಜಃಪುಂಜನಾಗೆ ॥ ೩ ॥

ಭಾಮಿನಿ

ಮಂದಮತಿಯಿಂ ಪಡೆದ ಶಾಪವ । ನಿಂದು ಪರಿಹರಗೈದ ಕಾರಣ । ಸುಂದರದಿ ಶೋಭಿಸುವ ಸರಸಿಗೆ ಮುಂದೆ ಧರೆಯೊಳಗೆ ॥ ಚಂದ್ರಭಾಗವೆನುತ್ತ ನಾಮವು । ಚಂದದಿಂದಹುದೆಂದು ಪೊಗಳುತ । ಚಂದ್ರ ತನ್ನಯ ಪುರಕೆ ಗಮಿಸಿದನಂದು ತೋಷದಲಿ ॥ ೧ ॥

ಮೊದಲನೆಯ ಸಂಧಿ ಮುಗಿದುದು

ವಾರ್ಧಿಕ

ಪರಮ ಸಂತಸದಿಂದ ಚಂದ್ರನಿರುತಿರಲಿತ್ತ । ಧರೆಯ ಜನರೆಲ್ಲರುಂ ಹರುಷದಿಂ ನಡೆತಂದು । ವಿರಚಿಸುತ ಮಜ್ಜನವ ಪರಮಾತ್ಮನೆಡೆಗೈದಿ ಪರಿಪರಿಯ ಭೋಗದಿಂದ ॥ ದುರಿತವರ್ಜಿತರಾಗಿ ವೈಕುಂಠಪುರವರದಿ । ನರರ

ಸಮುದಾಯಗಳ್ಕಂದಿರವ ರಚಿಸುತಿರೆ । ಪರಮಮುನಿಗಳೆ ಕೇಳಿರೆನುತ ಶುಕ ಯೋಗೀಂದ್ರ ಸರಸಿಮುಹಿಮೆಯ ಪೇಳ್ದನು ॥ ೧ ॥

ರಾಗ ಕಾಪಿ ಅಷ್ಟತಾಳ

ಭೂಲೋಕದೊಳಗಿಂತಾಶ್ಚರ್ಯ । ಕಂಡು । ಕಾಲನ ಚರರಿಗೆ ಕಾರ್ಯ ॥ ಕೋಳುಗೊಂಡಿಹುದು ಮುಂದೇನ ಮಾಡುವೆವೆಂದು । ಮೂಲವನರಿತು ತಮ್ಮೊಳಗೆ ಯೋಚಿಸಿದರು ॥ ೧ ॥ ಮೃಡನಿಂತು ಸರಸಿಯ ರಚಿಸಿ । ನ । ಮ್ಮೊಡೆಯನ ಕರ್ತವ್ಯ ನಿಲಿಸಿ ॥ ಕಡುಪಾಪಿ ನರರಿಗೆ ಶಿಕ್ಷೆಯ ರಚಿಸದೆ । ಸಡಗರದಿಂ ಮುಕ್ತಿಪದವನಿತ್ತಿಹನೀಗ ॥ ೨ ॥ ಮಾಸವೊಂದಾಯ್ತು ನಾವ್ ಬಂದು । ಕಡು । ದೋಷಿಗಳನು ಒಯ್ಯದಿಂದು ॥ ಪೋಷಕನಲ್ಲಿಗೆ ಬರಿದೆ ಪೋದರೆ ಜೀವ । ದಾಸೆ ಎಮಗೆ ಇಲ್ಲ ಮುಂದೇನಗೈವುದೊ ॥ ೩ ॥ ತಂಡ ತಂಡದಿ ಪೋಗುತ್ತಿಹರು । ಈ । ಕುಂಡದಿ ಮುಳುಗುತ್ತಾ ನರರು ॥ ಭಂಡರು ವೈಕುಂಠನಗರಕಲ್ಲದೆ ನಮ್ಮ । ದಂಡಧರನ ಪುರವರಕೆ ಸಾರುವರಿಲ್ಲ ॥ ೪ ॥

ಭಾಮಿನಿ

ಎನುತ ಯೋಚಿಸಿ ಚರರು ಕಾಲನ । ಘನತರಾಜ್ಞೆಗೆ ಬರುವ ವಸುಧೆಯ । ಜನರ ಕಾಣೆವೆನುತ್ತ ಚಿಂತಿಸುತಾಗ ಭೀತಿಯಲಿ ॥ ವನಧಿಶಯನನ ನೆನೆಯುತೊಯ್ಯನೆ । ಘನಜವದಿ ಹಿಂತಿರುಗಿ ಪೊಗುತಿರ । ಲನಕ ವೈವಸ್ವತನು ಒಡ್ಡೋಲಗಕೆ ನಡೆತಂದು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಚರಣಮೊಳೊಂದಿಪ ಚಿತ್ರಗುಪ್ತರನೆಲ್ಲ । ಪರಮುತ್ತಲಂತಕನು ॥ ಹರುಷದಿ ಕುಳ್ಳಿರಿಸುತಲವರೊಳು ಕೇಳ್ದ । ಧರೆಯ ವೃತ್ತಾಂತವನ್ನು ॥ ೧ ॥ ಬಂದ ಪಾತಕಿಗಳೆನ್ನೆಷ್ಟು ಮಂದಿಗಳೆಮ್ಮ । ಬಂಧನದೊಳಗಿಹರು ॥ ಇಂದು ವಿಚಾರಕಿನ್ನೆಷ್ಟು ಮಂದಿಗಳಿಹ । ರೆಂದು ಕೇಳಲ್ಕವರು ॥ ೨ ॥ ಒಡೆಯ ಲಾಲಿಸು ಬಂದ ಜನರ ವಿಚಾರವು । ನಡೆದು ಇರ್ಪುದು ಮೊದಲೆ ॥ ಪೊಡವಿಗೆ ಕಳುಹಿದ ದೂತರು ಬಾರದೆ । ನಡೆದುದು ತಿಂಗಳೊಂದು ॥ ೩ ॥

ರಾಗ ಕೇದಾರಗೌಳ ಝಂಪೆತಾಳ

ಕೇಳಿ ಕಿಡಿಕಿಡಿ ಸೂಸುತ । ಅಂತಕನು । ಕಾಲಭೈರವನಾಗುತ ॥ ಖೂಳರೀಯನುಚರರನು । ಹಿಡಿತಂದು । ಸೀಳಿ ಶಾಕಿನಿಗೀವೆನು ॥ ೧ ॥ ಎನಿತು

ಧೈರ್ಯಗಳಿವರಿಗೆ । ಆಜ್ಞೆಗಳ । ನೆನೆಸದೇ ಕೊಬ್ಬಿನೊಳಗೆ ॥ ಮನಬಂದ ಯೆಡೆಚರಿಪರು । ಮತ್ತತೆಯು । ಘನದುರುಳರತಿಮೂರ್ಖರು ॥ ೩ ॥ ಶಿರವ ಚೂರ್ಣಿಪೆನೆನ್ನುತ । ಅಂತಕನು । ಕೆರಳಿ ದಂಡವ ತೂಗುತ ॥ ಪೊರಡೆ ಬಂದರು ಚಾರರು । ಪದಕೆರಗಿ । ಭರಿತಭೀತಿಯೊಳೆಂದರು ॥ ೩ ॥

ರಾಗ ಸಾರಂಗ ಅಷ್ಟತಾಳ

ಧೀರ ನೀನಾಲಿಸಯ್ಯ । ನಿನ್ನೆಡೆಗೀಗ । ಸಾರುವರಿಲ್ಲವಯ್ಯ ॥ ಘೋರಪಾತಕ ಪರಿ । ಹಾರವಾಗುವದೊಂದು । ಧಾರಿಣಿಯೊಳು ದಿವ್ಯ । ಸರಸಿ ರಂಜಿಪುದೊಂದು ॥ ೧ ॥ ಅದರಿಂದ ಮೃಗಪಕ್ಷಿಯು । ಮಾನುಷ ಜಾತಿ । ವಿಧವಿಧವಹ ಪ್ರಾಣಿಯು ॥ ಪದುಮನಾಭನ ಪಾದ । ದೆಡೆಗೆ ಸೇರುವ ಭಕ್ತ । ರದುಭುತವಾಗಿದೆ । ಪೇಳ್ವುದೇನಿದೆ ಮುಂದೆ ॥ ೨ ॥ ನವ ಖಂಡಪೃಥ್ವಿಯೊಳು । ನಾವ್‌ಗಳು ಮೂರು । ಭುವನವ ಚರಿಸಿದೆವು ॥ ತವ ಪಾದದೆಡೆಗೆ ಸೇ । ರುವರಿಲ್ಲದಾಗಲು । ವಿವರಿಸುವರೆ ನಿಮ್ಮ । ಬಳಿಗೀಗ ಬಂದೆವು ॥ ೩ ॥

ರಾಗ ಮಾರವಿ ಏಕತಾಳ

ಕಡು ಕೋಪದಿ ನಡನಡುಗುತ ಕಾಲನು । ಘುಡುಘುಡಿಸುತಲೆಂದ ॥ ಪೊಡವಿಯೊಳೆಲ್ಲಿಹುದೀ ತೀರ್ಥೋದಕ । ಸಡಗರವೇನೆಂದ ॥ ೧ ॥ ಪಂಢರ ಪುರದೊಳಗಿರುತಿಹುದೈ ಕೊಳ । ಚಂಡಪಾತಿತ್ಯವನು ॥ ಖಂಡಿಸಿ ಜನಗಳ ಕಳುಹುವುದೈ ಕೇಳ್ । ಪಾಂಡುರಂಗನ ಬಳಿಗೆ ॥ ೨ ॥ ಹಿಂದಿಲ್ಲದ ಈ ತೀರ್ಥವು ಧರೆಯೊಳ । ಗಿಂದ್ಯಾರಿಂದಾಯ್ತು ॥ ಅಂದಗಳೆಲ್ಲವನರುಹೆನೆ ಕೇಳುತ । ಲೊಂದಿಸಿ ಪೇಳಿದರು ॥ ೩ ॥ ಪುರಹರನೊಂದಿನ ಪಾರ್ವತಿ ಸಹಿತಲೆ । ಹರುಷದಿ ನಡೆತಂದು ॥ ವಿರಚಿಸಿ ಸರಸಿಯ ಕರುಣಿಸಿ ವರವನು । ತೆರಳಿದ ನುತ್ಸಹದಿ ॥ ೪ ॥ ಎನೆ ಕೇಳುತಲಂತಕ ಭೋರ್ಗುಡಿಸುತ । ಲನುಚರರಿರ ವೇಗ ॥ ಘನತರಕಲ್ಮರ ಗಿರಿಗಳ ಸರಸಿಗೆ । ಕ್ಷಣದೊಳಗಡರ್ಕಿರೆಲಾ ॥ ೫ ॥ ತೆರಳಿರಿ ಮನುಜರ ಕಣ್ಗಿದು ಕಾಣದ । ತೆರನೊಳು ಮುಚ್ಚುತಲಿ ॥ ದುರುಳ ಪಾತಕಿಗಳ ನೆಳೆತಹುದೆನ್ನುತ । ಭರದೊಳು ಕಳುಹಿದನು ॥ ೬ ॥

ಭಾಮಿನಿ

ಒಡನೆ ಬಂದೆಮದೂತರೆಲ್ಲರು । ಕಡಿದು ತರು ಪಾಷಾಣಶೈಲವ । ನಡಕಿದರು ಕೊಣನೊಳಗೆ ಅಬ್ಬರಿಸುತ್ತಲಡಿಗಡಿಗೆ ॥ ಸಿಡಿಯೆ ನಿರ್ಮಲ ಜಲವು

ತನುವಿಗೆ ನಡೆದರಾ ವೈಕುಂಠಕೆಲ್ಲರು । ಸಡಗರನ ಕಾಣುತ್ತ ಉಳಿದವ ನೋರ್ವನೈತಂದು ॥ ೧ ॥

ಕಂದ

ಸಲಿಲದ ಪರಿಯಂ ಪೇಳುತ । ಘಳಿಲನೆ ಕಾಲಗೆ ವಂದಿಸಲಾಗಳ್ ಕೆರಳ್ದುಂ ॥ ಘುಳು ಘುಳು ಎಂಬುವ ಶಿಖಿಯಂ । ಪೊಳೆಯುವ ನೇತ್ರದಿ ಕೆಡಹುತಲಂತಕನೆಷ್ಟಂ ॥ ೧ ॥

ರಾಗ ಘಂಟಾರವ ಏಕತಾಳ

ಗಿರಿಯನೇರಿಸಿ ಸರಸಿಯ ಮುಚ್ಚುವೆ । ಧರೆಯ ಮಾನವರೆಲ್ಲರನು ನಾ । ತರುವೆನೀಕ್ಷಣವೆನುತಲಿ ॥ ೧ ॥ ತಿರುಹಿ ದಂಡವ ಭೀಷಣ ಕಲ್ಪಾಂತ । ಹರನೊ ಕಾಲಾಂತಕನೊ ಎಂಬುವ । ಪರಿಯೊಳಗೆ ಪಲ್ಮೊರೆಯುತ ॥ ೨ ॥ ಘನತೆಯಿಂದಲಿ ಮಹಿಷವನೇರುತ್ತ । ಕೊಣನ ಮುಚ್ಚುವೆನೆನುತ ಧರಣಿಗೆ । ಇನಸುತನು ನಡೆತಂದನು ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಹರಿ ಕೃಷ್ಣ ಕೇಶವ ನಗಧರನೆನ್ನುತ್ತ । ಕರದಿ ವೀಣೆಯ ಬಾರಿಸುತಲಿ ॥ ತ್ವರಿತದಿ ನಾರದಮುನಿಪನು ಹರುಷದಿ । ಪುರಹರನಲ್ಲಿಗೈತಂದು ॥ ೧ ॥ ಶಿರಸಾಷ್ಟಾಂಗವ ಗೈದು ನಿಂದಿರೆ ಪಂಚಶಿವ । ಪರಿ ಪರಿ ಮನ್ನಿಸುತಾಗ ॥ ತೆರಳಿ ಬಂದಿಹುದೇನು । ಅಪರೂಪ ವಾರ್ತೆಗ । ಳರುಹೆನೆ ಕೈಮುಗಿದೆಂದ ॥ ॥ ೨ ॥ ವರಚಂದ್ರಭಾಗದ ಸರಸಿಯ ಮುಚ್ಚಲು । ತರಣಿನಂದನ ಬಹನೀಗ ॥ ಪುರಹರ ನೀ ಗೈದ ಸರಸಿಯು ವ್ಯರ್ಥವು । ಅರಿತುದ ಮಾಡೆಂದು ನಡೆದ ॥ ೩ ॥

ರಾಗ ಭೈರವಿ ಅಷ್ಟತಾಳ

ನಾರದನೆಂದುದನು । ಕೇಳುತಲಾಗ । ಮಾರಸಂಹಾರಕನು ॥ ಧಾರಿಣಿ ಮೇಲೆ ತಾ ಬಡಿಯಲು ಜಡೆಯನ್ನು । ಘೋರದಾನವನುದಿಸೆ ॥ ೧ ॥ ಕೋರೆ ದಾಡೆಯ ಮಸೆದು । ಘೋರ್ಗರ್ಜಿಸುತ್ತ । ಭಾರಿಶೂಲವ ಪಿಡಿದು ॥ ಮೂರು ಶಿರವು ಪಂಚನೇತ್ರದಿ ಕಿಡಿ ಕಿಡಿ । ದೋರಿ ನಿಂದಿರೆ ಖಳನು ॥ ೨ ॥ ಕ್ರೂರದಂಷ್ಟ್ರನು ಎನ್ನುತ್ತ । ನಾಮವನಿತ್ತು । ಮಾರಾರಿ ಮನ್ನಿಸುತ್ತ ॥ ಧಾರಿಣಿಯೊಳು ಪಂಢರಾಪುರದೆಡೆಗೀಗ । ಸಾರೆಲೊ ತ್ವರಿತದಿಂದ ॥ ೩ ॥ ಸರಸಿಯ ಹಿಂದೆ ನಾನೇ । ಗೈದಿರ್ಪೆನು । ದುರುಳ ವೈವಸ್ವತನು ॥ ಗಿರಿಯ ನೇರಿಸಿ ಮುಚ್ಚುತಿಹನಂತೆಯಾತನ । ಭರದಿ ಬಂಧಿಸಿ ತಹುದು ॥ ೪ ॥

ಎನೆ ಹಸಾದಗಳೆನ್ನುತ್ತ । ವಂದಿಸಿ ಖಳ । ಘನಜಪದೊಳಗೈದತ್ತ ॥ ಕಿನಿಸಿಸಿಂ ಶೂಲವ ತಿರುಹುತ್ತ ನಿಂದನು । ಕೋಣನ ಬಳಿಯ ರವದಿ ॥ ೫ ॥

ರಾಗ ಮಾರವಿ ಏಕತಾಳ

ತರಣಿಜ ಸತ್ತ್ವದಿ ಗಿರಿಯೊಂದನು ಹೂಂ । ಕರಿಸುತ ಬರಸೆಳದು ॥ ಸರಸಿಯೊಳಿಕ್ಕುವೆನೆನುತಲೆ ನಡೆತರೆ । ಪರಿಕಿಸಿ ಖಳನವನ ॥ ೧ ॥ ಆರೆಲೊ ಸರಸಿಯ ಮುಚ್ಚುವ ಮದಹಂ । ಕಾರಿಯೆ ನಿನ್ನಸುವ ॥ ಘೋರನೆ ಚೂರ್ಣಿಪೆ ನಿಲು ನೀನೆನ್ನುತ । ಕ್ರೂರದಂಷ್ಟ್ರನು ತಿವಿದ ॥ ೨ ॥ ಎಲೆಲೇ ಭಂಡ ಖಳಾಧಮನ್ಯಾರೆಲೊ । ಕಲಹಕೆ ಬಂದಿಹೆಯಾ ॥ ಕೊಲುವೆನು ಕ್ಷಣದೊಳಗೆನ್ನುತಲಂತಕ । ಕಲಿಯಾಗಿರೆ ಕಂಡು ॥ ೩ ॥ ಪಾತಕಹರವೀ ಸರಸಿಯ ಮುಚ್ಚುವು । ದೇತಕೊ ಕಡುದುರುಳ ॥ ಭೂತಾಧಿಪನಿದ ಗೈದಿಹ ನರಿಯದೆ । ಘಾತಕ ಗೈವೆಯಲಾ ॥ ೪ ॥ ನರರೆಮ್ಮಯ ಪುರಕ್ಕೈತರದಂದದಿ । ಹರ ಗೈದಿಹುದೇಕೆ ॥ ಸರಸಿಯನಿದ ನಾ ಬಿಡೆ ಬಿಡೆನೆಂದಿಗು । ತೆರಳೆಲೊ ಖಳ ನೀನು ॥ ೫ ॥

ರಾಗ ಶಂಕರಾಭರಣ ಮಟ್ಟೆತಾಳ

ಅರರೆ ಧೂರ್ತ ನಿಲ್ಲು ನಿನ್ನ । ಶಿರವನರಿದು ಪೋಪೆನೀಗ । ಹರನ ದ್ರೋಹವ್ಯಾಕೆನುತ್ತ । ಲಿರಿದ ಶೂಲದಿ ॥ ೧ ॥ ಕ್ರೂರಪಾಪಿ ನಿನ್ನ ಬಡಿದು । ಘೋರನೊಯ್ದು ನರಕಕಿಡುವೆ । ಯಾರೊಳಿನಿತು ಪೇಳ್ವೆ ಎನುತ । ಮುರಿದ ಶೂಲವ ॥ ೨ ॥ ಮುಷ್ಟಿಯನ್ನು ಬಲಿದು ಖಳನು । ಸಿಟ್ಟಿನಿಂದಲೆರಗಲಾಗ । ದುಷ್ಟ ತಾಳೆನುತ್ತ ದಂಡ । ವೆತ್ತಿ ಒಡಿದನು ॥ ೩ ॥

ಭಾಮಿನಿ

ಶಿರವ ಕಂಪಿಸುತಾಗಲಾ ಖಳ । ಹರನೆ ಹಾ ಹಾ ಕೆಟ್ಟೆನೆನ್ನುತ । ಉರುಳೆ ಧರೆಗಾಧ್ವನಿಯ ಲಾಲಿಸಿ ಸಾಂಬ ಪಲ್ಗಡಿದು ॥ ದುರುಳನೀತನ ಮೂರು ದಿನದಲೆ । ದರದರನೆ ಎಳೆತಂದು ಪಾದದೊ । ಳುರುಳಿಸುತ ಶಿಕ್ಷಿಪೆನು ಬಿಡೆ ನಾನೆನುತ ಗರ್ಜಿಸಿದ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಅಕ್ಷಯಾತ್ಮಕ ಸರ್ವರಕ್ಷ ದಾನವಶಿಕ್ಷ । ಪಕ್ಷಿವಾಹನ ಲೋಕಾಧ್ಯಕ್ಷ ॥ ರಕ್ಷಿಸು ಕಮಲಾಕ್ಷನೆಂದು ನಾರದಮುನಿ । ತಕ್ಷಣ ಯಮನೆಡೆಗೈದಿ ॥ ೧ ॥ ಘನಪಾಪ ಗೈದೆಯ ತಾಳು ತಾಳೀಕ್ಷಣ । ಇನಜ ಕೇಳ್

ದಿನ ಮೂರರೊಳಗೆ ॥ ಮನುಥಾರಿಯು ಶಿಕ್ಷೆ ಗೈವನು ನೀನೀಗ । ಜಿನು
ಮಯು ಹರಿಮೆಡೆಗೈದಿ ॥ ೨ ॥ ತನುವ ರಕ್ಷಿಸಿಕೊಳ್ಳದಿರ್ದರೆ ಗುಪಿತದಿ ।
ಮನಸಿಜಾರಿಯು ನಿನ್ನ ಬಿಡನು ॥ ಮನಕೆ ಬಂದಂವವ ಮಾಡೆಂದು ನಾರದ ।
ಘನವೇಗ ನಡೆದನಂಬರಕೆ ॥ ೩ ॥

ರಾಗ ಮಧುಮಾಧವಿ ಆದಿತಾಳ

ನಾರದನೆಂದುದ । ಕೇಳುತಂತಕನು ॥ ಮಾರವೈರಿಯು ಭಯ । ದೊಳಗೆ
ಮರುಗಿದನು ॥ ೧ ॥ ಸರಸಿಯು ಮುಚ್ಚುವ । ಮನವ ತಾ ಬಿಟ್ಟು ॥ ಮುರ
ಹರನೆಡೆಗೈದಿ । ಎರಗಿ ಕಂಗೆಟ್ಟು ॥ ೨ ॥ ಪಾಲಿಸು ದೇವರ । ದೇವ ನೀನೆನ್ನ ॥
ಲೋಲ ಗೋಕುಲವಾಸ । ಕಾಯೊ ನೀ ಮುನ್ನ ॥ ೩ ॥ ಎನುತಲಿ ಚರಣ
ದೊಳ್ । ಹೊರಳುವ ಯಮನ ॥ ಜಿನುಮಯಾತ್ಮಕ ನೋಡಿ । ಪೇಳ್ದನು
ಹದನ ॥ ೪ ॥ ಮರುಗಬೇಡೆಲೆ ನಿನ್ನ । ಕಾವೆ ನಾನೀಗ ॥ ದುರಿತವೆಂತಿರಲದ ।
ಹರಿಪೆ ನಾ ಬೇಗ ॥ ೫ ॥ ಕಷ್ಟವ್ಯಾವುದು ಪೇಳು । ಮನದೊಳು ನೀನು ॥
ಗುಟ್ಟುಮಾಡಲು ಬೇಡ । ಕಾಯುವೆ ನಾನು ॥ ೬ ॥

ರಾಗ ತೋಡಿ ಆದಿತಾಳ

ಸರಸಿಜಾಕ್ಷ ಕೇಳೊ ನೀನು । ಧರೆಯೊಳ್ ಪಂಢರಾಪುರದಿ । ಹರನು
ಸರಸಿಯೊಂದ ರಚಿಸಿ । ಪರವ ತಾನಿತ್ತಿಹನಂತೆ ॥ ೧ ॥ ಮನುಜರೆಲ್ಲರದ
ರೊಳ್ ಮಿಂದು । ಜನುಮದಿಂದ ಮುಕ್ತರಾಗಿ । ಘನತರಾಜ್ಞೆಗೊದಗದಿರಲು
ಮನದಿ ಕ್ಲೇಶಗೊಂಡೆ ನಾನು ॥ ೫ ॥ ಸರಸಿಯು ಮುಚ್ಚಲು ಪೋಗೆ ।
ದುರುಳದೈತ್ಯನೋರ್ವನಲ್ಲಿ । ಧುರವ ಗೈದು ಮಡಿಯೆ ಹರನು । ಕೆರಳಿ ಶಪಥ
ಗೈದನಂತೆ ॥ ೩ ॥ ದಂಡಿಪೆನು ಮೂರು ದಿನದಿ । ಖಂಡಿತ ತಾನೆಂದನಂತೆ ।
ಖಂಡಪರಶು ಬಿಡನು ಪೊರೆಮೊ । ಪುಂಡರೀಕದಳನಯನ ॥ ೪ ॥ ಸುರಮುನಿ
ನಾರದನಿಂದ । ಅರಿತೆ ನಾನು ದೇವ ನಿನ್ನ । ಮರೆಯ ಹೊಕ್ಕೆ ಕಾಯೊ
ಕ್ಷೀರ । ಶರಧಿವಾಸ ನರಕಮಥನ ॥ ೫ ॥

ವಾರ್ಧಿಕ

ಅಂತಕನ ನುಡಿ ಕೇಳ್ದು ಮುರಹರಂ ಮನದೊಳಗೆ । ಚಿಂತೆಯಂ
ತಾಳ್ದಾಗ ಬಲರಾಮ ಸಾತ್ಯಕಿಯು । ಕಂತುಕೃತವರ್ಮಾದಿ ಯಾದವರೊಳು
ಸಿರುತಂ ಬಂತೀಗ ಹರನ ಕಲಹ ॥ ಎಂತು ಮಾಳ್ಪುದು ಮುಂದೆ ಭಾಪೆ
ಯಿತ್ತಿಹೆನಿವಗೆ । ಪಿಂತೆಗೆಯೆ ಜಗದೊಳಗೆ ನಂಬುವರೆ ಸರ್ವಜನ । ಕಂತುಹರ
ನೊಳ್ ಸಮರಗೈವುದೇ ಲೇಸೆಂದು ನಿಶ್ಚಯಿಸಿಕೊಂಡಿರ್ದನು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಜಯತು ಮತ್ಸ್ಯನೆ ಕೂರ್ಮ ಜಯ ವರಹ ನರಸಿಂಹ। ಜಯತು ವಾಮನರಾಮ ರಾಮ ॥ ಜಯತು ಕೃಷ್ಣನೆ ಬೌದ್ಧ ಕಲ್ಕ್ಯನೆನುತ ವೃತ್ಯಂ। ಜಯನೆಡೆಗೈದಿ ನಾರದನು ॥೧॥ ಖಳಕ್ರೂರದಂಷ್ಟ್ರನ ಮಡುಹಿ ದಂತಕನೀಗ। ಒಲವಿಂದಗೋಕುಲಕೈದಿ ॥ ಚೆಲುವ ಕೃಷ್ಣನ ಮರೆಗೊಂಡು ತಾನಡಗಿಹ। ತಿಳಿದಂತೆ ಮಾಡೆಂದು ನಡೆದ ॥ ೨ ॥

ರಾಗ ಮಾರವಿ ಏಕತಾಳ

ಹರನೀ ನುಡಿಯನು ಕೇಳುತಲಾಕ್ಷಣ । ತಿರುಹುತ ಕಂಗಳನು ॥ ಮುರಹರನೆನ್ನಯ ವೈರಿಯ ನಂಬಿಸಿ । ಮರೆಯೊಳಗಿಟ್ಟಿಹನೆ ॥೧॥ ಧರಣಿಯೆ ಮಗುಚಲಿ ಕುಲಗಿರಿ ಒಡೆಯಲಿ। ದುರುಳಗೆ ಶಿಕ್ಷೆಯನು ॥ ವಿರಚಿಸದಿರ್ದಡೆ ಶಪಥವೆ ಎನ್ನದು । ಮುರಹರಗಂಜುವೆನೆ ॥೨॥ ವೀರ ಕೇಸರಿ ಎಂತೆಂಬುವ ಪ್ರಮಥನ। ಘೋರನೆ ಕರೆಯುತಲಿ॥ ಸಾರೀಕ್ಷಣದಲಿ ಸಂಧಿಯ ರಚಿಪಡೆ। ಮಾರಪಿತನೊಳೀಗ ॥ ೩ ॥ ದಿಟ್ಟತನದಿ ಮರೆಗೊಂಡಿಹ ಕಾಲನ। ತಟ್ಟನೆ ಬಿಡದಿರಲು ॥ ಕೆಟ್ಟಿತು ಮುಂದಕೆ ಯದುಬಲಸಹಿತಲಿ। ಕುಟ್ಟುವೆನೆಂದುಸಿರು ॥೪॥ ಎನುತಾಜ್ಞಾಪಿಸಿ ಕಳುಹಲು ಪ್ರಮಥನು। ಘನವೇಗದೊಳೈದಿ ॥ ಮನುಮಥಪಿತನನು ಕಂಡೆರಗುತಲತಿ। ವಿನಯದಿ ಪೇಳಿದನು ॥

ರಾಗ ಜಂಜೋಟಿ ಅಷ್ಟತಾಳ

ಸರಸಿಜಾಂಬಕ ಲಾಲಿಸಯ್ಯ । ಪುರ । ಹರನು ಪೇಳಿದನೊಂದು ನುಡಿಯ ॥ ಪರಮೇಶನಹಿತನಂತಕನಿಲ್ಲಿಗೈತಂದು। ಮರೆಯ ಪೊಕ್ಕಿಹನಂತೆ ನಿನ್ನನು। ಭರದೊಳಾತನ ಬಿಡುವಡೆಂದನು ॥೧॥ ನಾರಿಯರೊಡನೆ ಗೋಕುಲದಿ। ಕ್ರೀಡಾ। ಗಾರದಿ ಮೆರೆದಂತೆ ರಣದಿ ॥ ಮಾರವೈರಿಯ ಕೂಡೆ ಹೆಣಗಲಸಾಧ್ಯವು। ಮಿಾರದಿರು ವಚನವನು ಪ್ರಮಥರ। ಸೇರಿ ಸಮರಕೆ ಬಹೆನು ನಿಶ್ಚಯ ॥ ೨ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ವೀರಕೇಸರಿವಚನ ಕೇಳುತ । ವಾರಿಜಾಂಬಕನೆಂದ ನಗುತಲಿ। ಸಾರಿ ಮರೆಗೊಂಡಿಹನ ಬಿಡೆ ನಾ। ನ್ಯಾರಭಯದಿ ॥೧॥ ಘುರವ ಪರಿ ಮಾರ್ಮಲೆತು ಕಾಂಬುದು । ಬರಿದೆ ಮಾತಿನೊಳೇನು ಸಾರ್ಥವು। ಧರೆಯ ತಲೆಕೆಳಗಾಗೆ ಬೆದರೆನು। ಬರಲಿ ರಣಕೆ ॥ ೨ ॥ ತಿರುಕನವ ಸುಡುಗಾಡಿನೊಳು ಸಂ।

ಚರಿಸಿ ಪೈಶಾಚಿಗಳ ಮಧ್ಯದಿ । ಮೆರೆವ ಪೌರುಷವಲ್ಲವೆನ್ನೊಳು । ಬರದು ವಿಜಯ ॥ ೩ ॥ ತ್ವರಿತದಿಂ ಬರಹೇಳು ನಡೆ ನಡೆ । ಧುರಕೆ ನಾ ಸನ್ನದ್ಧ ನಾಗಿಹೆ । ತೆರಳೆನಲು ಗಮಿಸುತ್ತ ಪ್ರಮಥನು । ಹರನೊಳೆಂದ ॥ ೪ ॥

ಭಾಮಿನಿ

ಕರುಣನಿಧಿ ಕೇಳೀಗ ತನ್ನಯ । ಮರೆಯುಗೊಂಡಂತಕನನೆಂದಿಗು । ತೊರೆದುಬಿಡೆ ಧುರಕೀಗ ಬರಲೆಂದೆನುತ ನಗಧರನು ॥ ಪರಿಪರಿಯ ನಿಂದಿಸುತ ಕಳುಹಿದ । ಹರನೆ ನಿನ್ನಭಿಮತಗಳಂದದಿ । ವಿರಚಿಸೆಂದೆಂಗಲ್ಕೆ ಹೂಂಕರಿಸುತ್ತ ಪಲ್ಮೊರೆದು ॥ ೧ ॥

ರಾಗ ಘಂಟಾರವ ಏಕತಾಳ

ಛಲವನೆಲ್ಲವ ಕೇಳುತ್ತ ಶಂಕರ । ಪ್ರಳಯಭೈರವನಾಗಿ ಗರ್ಜಿಸಿ । ಪೊಳೆವ ಶೂಲವ ತಿರುಹುತ ॥ ೧ ॥ ನಡಿಯಿರೀಕ್ಷಣ ಕಡು ಮೂರ್ಖ ಕೃಷ್ಣನ । ಹುಡುಗತನಗಳ ನಿಲಿಪೆನೆನ್ನುತ । ಒಡನೆ ಪ್ರಮಥರ ನೆರಹಿಸಿ ॥ ೨ ॥ ಭೂತ ವೇತಾಳ ಪೈಶಾಚಗಣಗಳ । ಖಾತಿಯಲಿ ಡಾಮರವು ಭೈರವ । ವ್ರಾತಗಳ ತಾ ಕೂಡುತ ॥ ೩ ॥ ಬಂದರಾಗ ಗೋಕುಲದ ಉದ್ಯಾನ । ಕಂದು ರೋಷಾ ಭೇಶದೊಳಗಾ । ಗಿಂದುಶೇಖರಸೇನೆಯು ॥ ೪ ॥ ಬಾರೆಲಾ ಜಾರಚೋರ ಗೋಪಾಲನೆ । ತೋರು ಎನ್ನೊಳು ಶೌರ್ಯವೆನ್ನುತ । ಲಾರುಭಟಿಸಿದ ಪುರಹರ ॥ ೫ ॥

ರಾಗ ಸೌರಾಷ್ಟ್ರ ಮಟ್ಟೆತಾಳ

ನಡೆದುದಾಗ ಸಮರಕೆನ್ನುತ । ವಾಸುದೇವಸೈನ್ಯ ಭರದಿ । ನಡೆದುದಾಗ ಸಮರಕೆನ್ನುತ ॥ ಪ ॥ ಕಾಮಪಾಲಸಾಂಬಮುಖ್ಯರು । ಮನ್ಮಥಾದಿ । ಭೀಮಬಲರ ನೆರಹುತಿದ್ದರು ॥ ಭೂಮಿ ನಡುಗುವಂತೆ ತಮ್ಮ । ಸ್ತೋಮವನ್ನು ನೆರಹಿ ಬೇಗ । ತೋಮರಾದಿ ಶಸ್ತ್ರಗಳನು । ವಾಮಕರದಿ ಧರಿಸಿಕೊಂಡು ॥ ೧ ॥ ಶಂಖಚಕ್ರಗದೆಯ ಧರಿಸುತ । ಗರುಡನೇರಿ । ಪಂಕಜಾಕ್ಷ ರೋಷತಾಳುತ ॥ ಮಂಕುತನದಿ ಬಂದ ಶಿವನ । ಬಿಂಕವನ್ನು ಮುರಿವೆನೆನುತ । ಡಂಕಭೇರಿಕಹಳರವದಿ । ಹೂಂಕರಿಸಿ ನಡೆದನಾಗ ॥ ೨ ॥ ಹರಿಯಸೇನೆ ಬರಲು ಕಾಣುತ । ಕಾರ್ತಿಕೇಯ । ಭರದಿ ಬಂದು ಶಿಖಿಯನೇರುತ । ಶರದ ಮಳೆಯ ಸುರಿಸಲಾಗ । ಹರಿಗೆ ನಮಿಸಿ ಪಂಚಶರನು । ಕರದಿ ಧನುವ ಪಿಡಿದು ರೋಷ । ವೆರದು ಮಾರ್ಮಲೆತು ಪೇಳ್ದ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಎಲವೊ ಕಾರ್ತಿಕೇಯ ಪಿಂದೆ । ಗೆಲಿದೆ ತಾರಕಾಖ್ಯನೆಂಬ । ಖಳನ ಧುರದೊಳೆನುತ ಗರ್ವ । ದೊಲವ ತೋರ್ಪೆಯ ॥ ೧ ॥ ಮಲ್ಲಸಹಸಿ ಎಂದು ಹರನ । ಗೆಲ್ವೆನೆನುತ ಬಂದು ಹಿಂದೆ । ಕೊಳ್ಳಿಯಂತೆ ಭಸ್ಮವಾದ । ಖುಲ್ಲ ನೀನೆಲಾ ॥ ೨ ॥ ಕುಸುಮಬಾಣಪಲ್ಲ ನಿನ್ನ । ಬಸಿರ ಬಗಿವ ಮಂತ್ರ ಪೂತ । ವಿಶಿಖವಿದರ ಬಲ್ಮೆ ನೋಡು । ಶಶಿಧರಾತ್ಮಜ ॥ ೩ ॥ ಸರಸಿಜಾಕ್ಷಿಯರನು ಮಂಕು । ಮರುಳು ಗೈವ ಪರಿಯಿದಲ್ಲ । ತರಳತನದ ನುಡಿಯೆನುತ್ತ । ಮುರಿದ ಬಾಣವ ॥ ೪ ॥ ಪಕ್ಷಿವಾಹತನಯನಾಗ । ದಕ್ಷಮಥನನಂತೆ ಕೆರಳಿ । ಅಕ್ಷಯಾಸ್ತ್ರವೆಸೆದ ಗುಹನ । ವಕ್ಷಕಾಕ್ಷಣ ॥ ೫ ॥ ಮುರಿದು ಬ್ರಹ್ಮಾಸ್ತ್ರ ದಿಂದ । ಕೊರೆವೆ ಕಂಠವೆನುತಲಾಗ । ಪರಮಶಕ್ತಿ ಶರವನೆಚ್ಚ । ಕಾರ್ತಿ ಕೇಯನು ॥ ೬ ॥

ಭಾಮಿನಿ

ಘನತರದ ಶಕ್ತಿಯನು ಮುರಿಯುವೆ । ನೆನುತ ಪ್ರತಿಶರ ಶಿಂಜಿನಿಗೆ ತಾ । ನನುಗೊಳಿಪ ಕಾಲದಲಿ ಬಂದೆರಗಲ್ಕೆ ಹಮ್ಮೈಸಿ ॥ ಮನಸಿಜನು ಮೂರ್ಛಿಸಲು ಕಾಣುತ । ಘನತರದ ಕ್ರೋಧದಲಿ ಹಲಧರ । ರಣಕೆ ಬರಲಾ ವೀರಭದ್ರನು ತಡೆದು ಹೂಂಕರಿಸಿ ॥ ೧ ॥

ರಾಗ ಭೈರವಿ ಏಕತಾಳ

ಖುಲ್ಲನೆ ನಿಲ್ಲು ನಿಲ್ಲೆಲವೊ । ರಣ । ದಲ್ಲಿ ನೀ ಸಾಯಬೇಡೆಲವೊ ॥ ಕಳ್ಳ ಯಮನ ಬಿಡು ಬೇಗ । ಗುಣ । ದಲ್ಲಿರು ಸಖ್ಯದೊಳೀಗ ॥ ೧ ॥ ಪೊಡ ವಿಯೆ ತಲೆ ಕೆಳಬೀಳೆ । ನಾ । ಬಿಡುವೆನೆ ಯಮನನು ಮರುಳೆ ॥ ಸುಡು ಗಾಡಿಲಿ ಮೆರೆದಿರುವ । ಪರಿ । ಇಡದಿರು ಗೆಲುವದು ರಣಪ ॥ ೨ ॥ ಹರಿ ಯಗ್ರಜನುಡಿ ಕೇಳಿ । ತಾ । ನುರುತರ ಕೋಪವ ತಾಳಿ ॥ ಪರಿಘವ ಬೀಸುತ ಲಾಗ । ಶಿರ । ಕೆರಗಲು ತಪ್ಪುತ ಬೇಗ ॥ ೩ ॥ ಕರುಳನ್ನುಗಿಯುವೆನೆನುತ । ಹೂಂ । ಕರಿಸಿ ಹಲಾಯುಧಗೊಳುತ ॥ ಗುರಿಯೊಳಗೆಸೆಯಲ್ಕದನು । ಧರೆ । ಗಿಳಿಸುತಲಬ್ಬರಿಸಿದನು ॥ ೪ ॥

ರಾಗ ಭೈರವಿ ಅಷ್ಟತಾಳ

ಕೆರಳುತ್ತ ಹಲಧರನು । ಭಾಪುರೆ ನಿನ್ನ । ಧರೆಯೊಳಗಿರಿಸೆ ನಾನು ॥ ಪರಿಕಿಸೆನುತಲಾಗ ಮುಷ್ಟಿಯ ಜಲಿಯುತ್ತ । ಲೆರಗಿದ ಭೋರ್ಗರೆದು ॥ ೧ ॥

ವೀರಭದ್ರನು ಕೋಪದಿ । ಘಾತಿಪೆನೀಗ । ತೋರಿಸು ಸಂಗರದಿ ॥ ಶೀರಿ
ತಾಯುದ್ಧಾರ್ಯಯುವೆನುತೊಂದಕೆರಡನ್ನು । ಶೂರತ್ವದಿಂದೆಚ್ಚನು ॥ ೨ ॥ ಉರಿ
ಸೂಸಿ ಬಲರಾಮನು । ಶಂಕಾಲನ । ತೆರನಂತೆ ಖತಿಗೊಂಡನು ॥ ಭರದಿಂದ
ಭುಜಕೆ ಜಜ್ಝರಿಸಿದ ಭುಜವನ್ನು । ಧರಣಿ ಕಂಪಿಸಲಾಕ್ಷಣ ॥ ೩ ॥ ಭಳಿರೆ
ಶಭಾಸೆನ್ನುತ್ತ । ಮುಷ್ಟಿಯನಾಗ । ಬಲಿದು ಖಾತಿಯ ತಾಳುತ್ತ ॥ ಘಳಿಲ
ನೊಕ್ಷಕೆ ವೀರಭದ್ರನೆರಗಲಾಗ । ಹಲಧರ ಮೂರ್ಛಿಸಿದ ॥ ೪ ॥

ಭಾಮಿನಿ

ಪರಿಕಿಸುತಲಾಕ್ಷಣದಿ ನಗಧರ । ನರಹರಿಯ ತೆರನಂತೆ ಗರ್ಜಿಸಿ । ತಿರು
ಹುತಲೆ ಚಕ್ರವನು ರಣಕಿದಿರಾಗೆ ಕಾಣುತಲಿ ॥ ಪುರಹರನು ಶೂಲವನು
ನೆಗಹುತ । ಅರರೆ ಎನ್ನೊಳು ನಿನಗೆ ಸಮರವೆ । ಕರಚಮತ್ಕಾರವನು
ತೋರೆಂದೆನುತ ಹೂಂಕರಿಸೆ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಹರುಷದಿಂ ಶ್ಮಶಾನದಲ್ಲಿ । ಮೆರೆವ ಶೌರ್ಯವಲ್ಲ ಸಮರ । ಬೆರಸಿ ಭೂತ
ಗಣಗಳೊಡನೆ । ಚರಿಪುದುಚಿತವು ॥ ೧ ॥ ಗೊಲ್ಲಸತಿಯರೊಡನೆ ಸುರತ ।
ದಲ್ಲಿ ಪ್ರೌಢನಹುದೊ ನೀನು । ಸಲ್ಲಿಸೆನಗೆ ಯಮನನೀಗ । ಒಳ್ಳೆಮಾತಿಲಿ ॥
॥ ೨ ॥ ವರವನಿತ್ತು ಬಾಣನಲ್ಲಿ । ಚರನ ತೆರದೊಳಿದ್ದು ಕಡೆಗೆ । ಕರವನರಿಸಿ
ದಂತೆ ಯಮನ ; ತೊರೆಯೆ ನಿಶ್ಚಯ ॥ ೩ ॥ ಪುರುಷರಿಂಗೆ ಮೋಸಗೈದು ।
ತರುಣಿಯರನು ಬೆರೆದ ಜಾರ । ನರಿವೆ ನಿನ್ನ ರೀತಿಗಳನು । ಪರಮ ಶೂರನು ॥

ರಾಗ ಕೇದಾರಗೌಳ ಅಷ್ಟತಾಳ

ಜಾರ ನೀನೆಲೊ ಹಿಂದೆ ಷಟ್ಪುರದೈತ್ಯರ । ನಾರಿಯರಿದಿರು ಪೋಗಿ ॥
ತೋರದೇಹದಿ ಹುಚ್ಚರಂತೆ ಬತ್ತಲೆ ನಿಂದು । ನಾರಿಯರ್ಶಾಪಗೊಂಡೆ ॥ ೧ ॥
ಮುಂದಮತಿಯೆ ಜರಾಸಂಧಗೆ ಬೆದರುತ್ತ । ಹಿಂದೆ ದಿಗ್ದೇಶವನ್ನು ॥ ಪೊಂದಿ
ನಿಳಯಗೈದು ಬದುಕಿದ ಲಂಡಿಯೆ । ತಂದೆಯೊ ಯಮನ ಗಾಥೆ ॥ ೨ ॥
ಲಂಡಿ ನಾನಲ್ಲ ಕೇಳೆಲೊ ಭಸ್ಮಾಸುರನಿಂಗೆ । ಕೆಂಡದ ಹಸ್ತವಿತ್ತು ॥ ಭಂಡ
ತನದಿ ಎನ್ನ ಮರೆಗೊಂಡ ಪಾಮರ । ಚೆಂಡನರಿವೆ ನೋಡೆಲೋ ॥ ೩ ॥
ಶರಣನಾಗಿಹ ಬಲಿಯೆಡೆಗೈದಿ ಧರಣಿಯ । ತಿರಿದು ಮಸ್ತಕದೊಳಗೆ ॥ ಚರಣವ
ನಿಟ್ಟು ಪಾತಾಳಕೋಡಿಸಿದಂಥ । ಪರಮವಂಚಕನು ನೀನು ॥ ೪ ॥ ದಶ

ಶಿರನಿಗೆ ಪ್ರಾಣಲಿಂಗ ಪಾರ್ವತಿಯನ್ನು । ಕುಶಲದಿಂದಿತ್ತವನು ॥ ಅಸಮ ವಿಕ್ರಮಿಯು ತಾನೆಂಬೆಯ ಭಂಡನೆ । ಉಸಿರದಿರೆನ್ನೊಡನೆ ॥ ೫ ॥

ರಾಗ ಮಾರವಿ ಏಕತಾಳ

ಸೋದರಮಾವನ ಮಡುಹಿದ ಪಾಪ ಸಂ । ಪಾದನೆಯಾಗಿಹುದು ॥ ಮೇದಿನಿಯೊಳು ಬಲುನಿಂದಕ ನೀನೀ । ಗಾದೆಯೊ ದುಷ್ಕೃತನೆ ॥ ೧ ॥ ಸತಿ ಪಿತನಾಗಿಹ ದಕ್ಷಬ್ರಹ್ಮನ । ಖತಿಯೊಳು ಕೊಲಿಸಿದನೆ ॥ ಇತರರ ನಿಂದಿಪು ದೇತಕೊ ಬಲ್ಲೆನು । ಮತಿಯುತ ನೀನಹುದು ॥ ೨ ॥ ಕರುಣದಿ ಸ್ತ್ರಸ್ಯವ ನೀಯಲು ಬಂದಿಹ । ತರುಣಿಯ ಸಂಹರಿಸಿ ॥ ಮೆರೆದೆಯೊ ಪೌರುಷದಿಂದ ಸ್ತ್ರೀಹತ್ಯದೊ । ಳರಿತಿಹೆ ನಿನ್ನೊಲವ ॥ ೩ ॥ ದುರುಳರ ಭೇದಿಪ ಬಿರುದುಗ ಳೆನ್ನದು । ತರಿದಿಹೆ ಪೂತನಿಯ ॥ ಸರಸಿಜಜನ್ಮಿಯ ಶಿರವರಿದೇತಕೆ । ತಿರಿದೆಯೊ ಲೋಕದಲಿ ॥ ೪ ॥ ನಿಂದೆಯ ಮಾತುಗಳೇಕೆಂದೆನುತಲಿ । ಅಂಧಕರಿಪು ಗಜರಿ ॥ ಇಂದೀ ಶರದಲಿ ಪೌರುಷ ನಿಲಿಸುವೆ । ನೆಂದೆಚ್ಚನು ರವದಿ ॥ ೫ ॥ ಮುರಹರನಾಕ್ಷಣ ಕನಲುತ ಚಕ್ರವ । ತಿರುಹುತಲಾರ್ಭಟಿಸಿ ॥ ಶರಗಳ ಖಂಡಿಸಿ ಕೆಡಹಿದನೊಂದೇ । ಕ್ಷಣದೊಳಗಾ ಸಹಸಿ ॥ ೬ ॥ ಹೊಡೆವನು ಶರ ಹರ ಕಡಿದನು ಮುರಹರ । ಬಿಡದೀಪರಿಯೊಳಗೆ ॥ ನಡೆದುದು ಸಮರವು ದ್ವಾದಶದಿನಗಳು । ಕಡುಕೋಪದೊಳಾಗ ॥ ೭ ॥ ಕಂಡಾಕ್ಷಣದೊಳು ಸಪ್ತ ಋಷೀಶರು । ಚಂಡತಪೋಧನರು ॥ ಖಂಡಿತ ಲೋಕವು ನಿಲದೆನ್ನುತ ಭಯ । ಗೊಂಡೋಡುತ ಬಂದು ॥ ೮ ॥

ರಾಗ ಬೇಗಡೆ ಏಕತಾಳ

ಬಿಡಿರಿ ಬಿಡಿರೈ ಸಮರವಿದು ಸಲ್ಲ । ಜಗದಾಧಿಪತಿಗಳೆ । ಪೊಡವಿ ಜನ ಗಳು ನಗುತಲಿಹರಲ್ಲ ॥ ಕಡುಮಹೋಗ್ರದಿ ರಣವ ಗೈದರೆ । ಪೊಡವಿ ನಿಲ್ಲುವು ದುಂಟೆ ಸಮರದ । ತೊಡಕ ಬಿಡಿ ಬಿಡಿ ಪದಕೆ ನಮಿಪೆವು । ಜಡಜನೇತ್ರರೆ ಕೋಪವ್ಯಾತಕೆ ॥ ೧ ॥ ನರರು ಮಾಡುವ ಪಾಪಕರ್ಮಗಳ । ಅರಿತಾಗಲವ ರಿಗೆ । ತರತರಾಜ್ಞೆಯ ಗೆಯ್ಯುವಂದಗಳ ॥ ತರಣಿಯಾತ್ಮಜನಿಂಗೆ ಪೂರ್ವದಿ । ಹರುಷದೊಳಗಧಿಕಾರವಿತ್ತಿರಿ । ಅರಿಯದವರಂತವನಿಗೋಸುಗ । ಧುರವ ಗೆಯ್ಯುವಿರೇಕೆ ಸುಮ್ಮನೆ ॥ ೨ ॥ ಸರಸಿಯನು ನಿರ್ಮಿಸಿದ ಕಾರಣದಿ । ಬಹು ಕ್ರೂರಪಾಪವ । ನರರು ಗೆಯ್ಯುತ ಪೋಗಿ ಮಜ್ಜನದಿ ॥ ಪರಿಶುಚಿಗಳಾಗು ತಲೆ ನಿಮ್ಮಯ । ಚರಣಸೇವೆಗೆ ಬರುವ ಕಾರಣ । ಧರೆಯೊಳಗೆ ಪಾಪಗಳ ಮಾಡ್ವರೆ । ಸರಸಿ ಇಹುದೆಂದೆನುತ ಗೈವರು ॥ ೩ ॥

ವಾರ್ಧಿಕ

ಈ ರೀತಿಯೊಳ್ ಸಪ್ತಋಷಿವರರು ಪೇಳಲ್ಕೆ । ಮಾರವೈರಿಯು ಪೇಳ್ದ ಯಮನು ತಾನೆಸಗುತಿಹ । ಕಾರಿಯವು ಪೋದುದಕೆ ತಿಳಿಸದೆನ್ನೊಳು ಬಂದು ಘೋರಿಕೊಬ್ಬಿನೊಳ್ ಪರಸಿಯು ॥ ಸಾರಿ ಮದವಲಿ ಮುಚ್ಚಲಿತ್ತಿಸುತ ಮತ್ತೆಮ್ಮ । ಕ್ರೂರದಂಷ್ಟ್ರನ ಭರದಿ ಸಂಹಾರಗೈದುದಕೆ । ಘೋರ ಶಿಕ್ಷಿಪೆನೆನುತ ಶಪಥಗೈದಿರೆ ನಾನು ಮಾರಪಿತನಂ ಸೇರ್ದನು ॥ ೧ ॥

ಕಂದ

ಪುರಹರನೆಂದುದಕಾಕ್ಷಣ । ಪರಮಾಹ್ಲಾದದಿ ಋಷಿಗಳು ಕರೆತಂದೆ ಯಮನಂ ॥ ಚರಣದಿ ಕೆಡಹಲ್ ಬೇಗಂ । ಪರಶಿವನಡಿಯೊಳ್ ಪೊರಳುತೆ ಸ್ತುತಿಸಿದನಾಗಳ್ ॥ ೧ ॥

ರಾಗ ಸುರುಟಿ ಏಕತಾಳ

ಪಾಹಿ ಭಕ್ತೋದ್ಧರಣ । ಶಂಕರ । ಪಾಹಿ ವ್ಯಾಳಾಭರಣ ॥ ಪಾಹಿ ತ್ರ್ಯಂಬಕ ಮಾಂ । ಪಾಹಿ ಗಂಗಾಧರ । ಪಾಹಿ ಚರ್ಮಾಂಬರ । ಪಾಹಿ ಗುಣಾಕರ ॥ ೧ ॥ ಯಕ್ಷಸುರಾದಿಗಳು । ಚಾರಣ । ಪಕ್ಷಿಮೃಗಾದಿಗಳು ॥ ತ್ರ್ಯಕ್ಷನೆ ಸಲಹೆನೆ । ರಕ್ಷಿಪೆ ಕರುಣದಿ । ಲಕ್ಷ್ಯಯಾತ್ಮ ನಿಟೆ । ಲಾಕ್ಷನೆ ಸಲಹೈ ॥ ೨ ॥ ರುಂಡಮಾಲನೆ ಹರನೆ । ಮೃತ್ಯುರ । ಖಂಡಿಪ ಪರಶಿವನೆ ॥ ಖಂಡಪರಶು ಮೃಡ । ಕುಂಡಜಗೊಲಿದನೆ । ಚಂಡಿಕೆಪತಿ ದೋ । ರ್ದಂಡಪರಾಕ್ರಮಿ ॥ ೩ ॥

ರಾಗ ಕೇದಾರಗೌಳ ಆದಿತಾಳ

ಅಸುರವಿದ್ರಾವಣ । ನಮಿತಪಾದಾಬ್ಜಂ ॥ ಕ್ಷಮಿಸಪರಾಧವ । ಮಮತೆಯೊಳೀಡುತಂ ॥ ೧ ॥ ದುರುಳತನದ ನಾನು । ಚರಣಕೆ ನೆಗಳಿ ॥ ಪರಮಪಾತಕ ಗೈದೆ । ಹರಿಸು ತ್ರಿಶೂಲಿ ॥ ೨ ॥ ಮದಮುಖಮರ್ದನ । ಕದನಕುಠಾರ ॥ ಹೃದಯಪಂಚಾತ್ಮಕ । ಮದನಸಂಹಾರ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಪರಿಪರಿಯು ಸನ್ನುತಿಸಿ ಚರಣದಿ । ಪೊರಳುತಿಹ ಯಮನನ್ನು ಕಾಣುತ । ಹರನು ನಿನಗಿದೆ ಶಿಕ್ಷೆಯಾದುದು । ಪೇಳಿಪೆ ಕೇಳು ॥ ೧ ॥ ತೆರಳು ಮುನ್ನಿನ ತೆರದಿ ಮನುಜರ । ದುರಿತಸುಕೃತಂಗಳ ವಿಚಾರದಿ । ವಿರಚಿಪುದು ಶಿಕ್ಷೆಗಳ ನೆನ್ನುತ । ಹರಿಯೊಳೆಂದ ॥ ೨ ॥ ಬರಿದೆ ಕದನಗಳಾಯ್ತು ನಿನ್ನೊಳು । ಇರಿಸ

ದಿರು ಕ್ರೋಧವನು ಮನದಲಿ । ಹರಿಹರರು ಸಮ್ಮೊಳಗೆ ಭೇದಗ । ಳಿರದು ಕೇಳ್ವೈ ॥ ೩ ॥ ಎಸೆವ ಕಾರ್ತಿಕ ಶುಕ್ಲದೇಕಾ । ದಶಿಯೊಳೀ ಸರಸಿಯೊಳು ಮಜ್ಜನ । ವೆಸಗುವರು ವೈಕುಂಠಕ್ಕೈದುವ । ರೊಸುಧೆಯೊಳಗೆ ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಹರಿಹರರೀಪರಿ ಸರಸಿಗೆ ವರವನ್ನು । ಕರುಣಿಸಿ ವೇಗದಲ್ಲಿ ॥ ಧುರದೊಳು ಮೂರ್ಛಿತರಾದರನೆಬ್ಬಿಸಿ । ವರಖುಷಿಗಳ ಕಳುಹಿ ॥ ೧ ॥ ಹರಿಹರರುಭಯರು ತಮ್ಮಯ ನಗರಿಗೆ । ತೆರಳಿದರ್ ಮೋದದಿಂದ ॥ ಸರಸಿಯು ದೆಸೆಯಿಂದ ಚಂದ್ರಭಾಗದ ನದಿ । ಪರಿವುದು ಧರೆಯೊಳಗೆ ॥ ೨ ॥ ಎಂದು ಈಪರಿ ಪಂಢರಾಪುರಮಹಿಮೆಯ । ಚಂದದಿ ಶುಕಮುನಿಯು ॥ ಸ್ಕಂದಪುರಾಣದ ಕಥೆಗಳ ಮುನಿಗಳ್ಗೆ । ಪಿಂದೆ ತಾನುಸಿರ್ಪನು ॥ ೩ ॥ ವರತೀರ್ಥಾವಳಿ ತುಂಗನದಿಯ ದಕ್ಷಿಣದೊಳ । ಗಿರುವ ಪನಸಪುರದ ॥ ಉರಗೇಂದ್ರಶಾಸ್ತ್ರಿಯ ತರಳ ನರಕೇಸರಿ । ವಿರಚಿಸಿದನು ಕೃತಿಯ ॥ ೪ ॥ ಶಾರ್ವರಿವತ್ಸರ ಭಾದ್ರಪದದಿ ನಾನು । ಪಾರ್ವತಿಪತಿದಯದಿ ॥ ಪೂರ್ವಪಕ್ಷದ ಬಿದಿಗೆಯು ಚಂದ್ರವಾರದಿ । ಗೀರ್ವಾಣಿ ತಿಳಿಸಿದಂತೆ ॥ ೫ ॥ ಪರಿಪೂರ್ಣಗೈದಿಹೆನರಿಯೆನು ಕೃತಿಗಳ । ಪರಮ ವಿದ್ವಜ್ಜನರು ॥ ಹರುಷದಿ ಮೆರೆಸುವುದಿದನು ಕಾರುಣ್ಯದಿ । ವರಕವಿಗಳಿಗೊಂದಿಪೆ ॥ ೬ ॥ ಅಪ್ಪುತಪ್ಪುಗಳಿರೆ ಪ್ರಾಜ್ಞರಾದವರಿದ । ನೊಪ್ಪವ ಮಾಡಿಕೊಂಡು ॥ ಅಪ್ಪ ವಿಟ್ಠಲನನ್ನು ನೆನೆವಂತೆ ಸರ್ವರು । ತಪ್ಪದೆ ಬೋಧಿಪುದು ॥ ೭ ॥

ಮಂಗಲ

ರಾಗ ಮೋಹನ ಅಷ್ಟತಾಳ

ಮಂಗಲ ಜಯ ಜಯತು । ಜಯತು ಜಯ । ಮಂಗಲ ಜಯ ಜಯತು ॥ ॥ ಪ ॥ ಮಂಗಲ ಜಯ ಜಯ ಶೃಂಗಾರದ ಜಗ । ನ್ಮಂಗಲಮೂರುತಿ ರಂಗನಾಥನಿಗೆ ॥ ಅ ॥ ಕರದೊಳು ಶಂಖಚಕ್ರಾಬ್ಜವ ಧರಿಸುತ । ಮೆರೆಯುವ ನರಹರಿಗೆ ॥ ನರಕಮುರಾಸುರ ಮುಷ್ಟಿಕದೈತ್ಯನ । ಕೊರಳನು ಕೊಯ್ದಸಿಗೆ ॥ ಮುರುಳಕಂಸಾಸುರಕರುಳನು ಹರಿದಗೆ । ಚರಣಪಂಕೇಜಕೆ ಎರಗುತ ಪಾಡುವೆ ॥ ೧ ॥ ಅಷ್ಟಮಸ್ತ್ರೀಯರ ಸೀರೆಯ ಸೆಳೆಯುತ । ತಟ್ಟನೆ ಮರವನೇರಿ ॥ ದಿಟ್ಟತನದಿ ಕೈತಟ್ಟುತ ನಗುತಲೆ । ಬಟ್ಟ ಕುಚವ ನೋಡಿ ॥ ಕೆಟ್ಟಿಷ

ಸ್ವಾಮಿಯೆ ರಕ್ಷಿಸೆಂದೆನುತಿರೆ । ಬಟ್ಟೆಯನಿತ್ತಿಹ ವಿಟ್ಠಲಮೂರ್ತಿಗೆ ॥ ೨ ॥ ಮರುಳ ಹಿರಣ್ಯಕ ತರಳನ ಬಾಧಿಸೆ। ಮರುಗುತ ಸ್ತುತಿಮಾಡೆ ॥ ಮರುಕದಿ ಸ್ತಂಭದಿ ನರಹರಿರೂಪದಿ । ಪೊರಡುತ ನೀ ಕೂಡೆ ॥ ಪರಮಕಿಂಕರನನ್ನು ಸಲಹುವ ಮನದಲಿ । ಭರದೊಳು ದನುಜನ ತರಿದ ನೃಸಿಂಹಗೆ ॥ ೩ ॥

ಯಕ್ಷಗಾನ ಪುಂಡರೀಕಚರಿತ್ರೆ ಮುಗಿದುದು

ಶ್ರೀಕೃಷ್ಣಾರ್ಪಣಮಸ್ತು

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಸಲ್ಪಟ್ಟಿತು.
ತಾ. ಶಕ ೧೮೭೫. ೧,೦೦೦-2-1953

ಯಕ್ಷಗಾನ ಪ್ರಸಂಗ ಪುಸ್ತಕಗಳು

ದೇವೀಮಹಾತ್ಮೆ ಪ್ರಸಂಗ	೦	೮	೦
ಕುಮಾರವಿಜಯ (ಶೂರಪದ್ಮಾಸುರಕಾಳಗ)	೦	೮	೦
ಪದ್ಮಾವತೀಕಲ್ಯಾಣ	೦	೬	೦
ಭದ್ರಾಯುಚರಿತ್ರೆ	೦	೬	೦
ಸಭಾಲಕ್ಷಣ ಪ್ರಸಂಗಪೀಠಿಕೆ	೦	೮	೦
ಹಾಸ್ಯಮಂಜರೀ	೦	೮	೦
ಯೋಗಿನೀಕಲ್ಯಾಣ	೦	೫	೦
ಮೀನಾಕ್ಷಿಕಲ್ಯಾಣ	೦	೫	೦
ಅಂಧಕಾಸುರನ ಕಾಳಗ	೦	೫	೦
ಪ್ರಭಾವತೀಕಲ್ಯಾಣ (ವಜ್ರನಾಭಕಾಳಗ)	೦	೫	೦
ಮದಾಲಸೆಕಲ್ಯಾಣ	೦	೪	೦
ಪಲಾಂಡುಚರಿತ್ರೆ	೦	೪	೦
ಮೋಹಿನೀಚರಿತ್ರೆ	೦	೨	೦
ವಂಶಾವಳಿ (ಸೂರ್ಯ ಚಂದ್ರ ಯದು)	೦	೨	೦
ಜಲಂಧರನ ಕಾಳಗ	೦	೫	೦
ಧ್ರುವಚರಿತ್ರೆ	೦	೬	೦
ಸಮುದ್ರಮಥನ	೦	೫	೦
ವೃತ್ರಾಸುರಕಾಳಗ	೦	೬	೦
ಗಿರಿಜಾಕಲ್ಯಾಣ	೦	೫	೦
ಹಿರಣ್ಯಾಕ್ಷವಧೆ	೦	೪	೦
ಪ್ರಹ್ಲಾದಚರಿತ್ರೆ	೦	೫	೦
ರತ್ನಾವತೀಕಲ್ಯಾಣ (ಪೃಥವರ್ಮಕಾಳಗ)	೦	೫	೦
ಅಂಬರೀಷಚರಿತ್ರೆ	೦	೨	೦
ಭಸ್ಮಾಸುರಮೋಹಿನಿ	೦	೬	೦
ಶ್ರೀಕೃಷ್ಣಬಾಲಲೀಲೆ	೦	೫	೦
ಬಿಲ್ಲಹಬ್ಬ ಕಂಸವಧೆ	೦	೫	೦
ರೇವತೀಕಲ್ಯಾಣ	೦	೮	೦
ಯಾದವಾಭ್ಯುದಯ	೦	೬	೦
ಚಂದ್ರಾವಳೀಪ್ರಸಂಗ	೦	೫	೦
ರುಕ್ಮಿಣೀಸ್ವಯಂವರ	೦	೫	೦